

# ಬೆಳಗಾವಿ ವರದಿ

ಪ್ರಧಾನ ಸಂಪಾದಕರು: ಸತೀಶ್.ಬಿ.ಜಿ

BELAGAVI VARADI KANNADA DAILY

ಕನ್ನಡ ದಿನಪತ್ರಿಕೆ 24

Read,Share and Follow - www.belagavivaradi.com

Vol-04 | Issue: 249 | ₹ ಬೆಲೆ: 4 | Sunday, 26, November,2023 | newsbelagavi@gmail.com | 9900332089 | Regn,No:G-2/PMG/KA/NK/BM/139/2021-23


## ಹಾಸನ: ಕೃಷ್ಣೇಗೌಡ ಹತ್ಯೆ ಪ್ರಕರಣ ಸಿಐಡಿ ತನಿಖೆಗೆ




ಹಾಸನ: ಗ್ರಾನೈಟ್ ಉದ್ಯಮಿ, ಮಾಜಿ ಸಚಿವ ಹೆಚ್ ಡಿ ರೇವಣ್ಣ ಆಪ್ತ ಕೃಷ್ಣೇಗೌಡ ಹತ್ಯೆ ಪ್ರಕರಣವನ್ನು ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಸಿಐಡಿಗೆ ವಹಿಸಿದ್ದಾರೆ.

ತನಿಖಾ ವರದಿಗೆ ಸಂಬಂಧಪಟ್ಟಾ ಎಲ್ಲಾ ಕಡತಗಳನ್ನು, ಮುಂದಿನ ಹಂತದ ತನಿಖೆಗಾಗಿ ಸಿಐಡಿಗೆ ವರ್ಗಾವಣೆ ಮಾಡುವಂತೆ ಎಡಿಜಿಪಿ ಹಾಸನ ಪೊಲೀಸರಿಗೆ ಸೂಚನೆ ನೀಡಿದ್ದಾರೆ.

ಹತ್ಯೆ ಪ್ರಕರಣದ ಸಂಬಂಧ ಈ ವರೆಗೂ 10 ಮಂದಿ ಆರೋಪಿಗಳನ್ನು ಬಂಧಿಸಲಾಗಿದೆ. ಆದರೆ ಮುಖ್ಯ ಆರೋಪಿ ಯೋಗಾನಂದ ಘಟನೆ ನಡೆದಾಗಿನಿಂದ ಕಣ್ಮರೆಯಾಗಿದ್ದಾನೆ.

ಆಗಸ್ಟ್ 9 ರಂದು ಹಗಲಿನಲ್ಲಿ ಹಾಸನದ ಹೊರವಲಯದಲ್ಲಿರುವ ಗ್ರಾನೈಟ್ ಕಾರ್ಖಾನೆಯ ಮುಂದೆ ಹಣಕಾಸು ಮತ್ತು ವ್ಯವಹಾರದ ವಿಚಾರವಾಗಿ ಕೃಷ್ಣೇಗೌಡ ಅವರನ್ನು ಬರ್ಬರವಾಗಿ ಹತ್ಯೆ ಮಾಡಲಾಗಿತ್ತು.

## ಕಂಬಳ ಹಬ್ಬಕ್ಕೆ ಅಶ್ವಿನಿ ಪುನೀತ್ ರಾಜ್ಕುಮಾರ್ ಚಾಲನೆ

### ಕಾರ್ಯಕ್ರಮದಲ್ಲಿ ವೀರಯೋಧ ಪ್ರಾಂಜಲ್ ಅವರಿಗಾಗಿ ಮೌನಾಚರಣೆ

ಬೆಂಗಳೂರು: ಅದ್ದೂರಿಯಾದ ಸಮಾರಂಭದಲ್ಲಿ ನಮ್ಮ ಕಂಬಳ, ಬೆಂಗಳೂರು ಕಂಬಳ ಸ್ಪರ್ಧೆಯನ್ನು ಅಶ್ವಿನಿ ಪುನೀತ್ ರಾಜ್ಕುಮಾರ್ ಅವರು ಉದ್ಘಾಟನೆ ಮಾಡಿದರು. ಇದರಿಂದ ಇದೇ ಮೊದಲ ಬಾರಿಗೆ ಸಿಲಿಕಾನ್ ಸಿಟಿಯಲ್ಲಿ ಕಂಬಳ ಸ್ಪರ್ಧೆಯನ್ನು ನಡೆಸಲಾಗುತ್ತಿದೆ. ಇಂದು ಮತ್ತು ನಾಳೆ ಈ ಸ್ಪರ್ಧೆ ನಡೆಯಲಿದ್ದು ಒಟ್ಟು 178 ಜೋಡಿ ಕೋಣಗಳು ಇದರಲ್ಲಿ ಭಾಗವಹಿಸಿವೆ.

ಬೆಂಗಳೂರು ಕಂಬಳ ಸ್ಪರ್ಧೆಗೆ ಅಶ್ವಿನಿ ಪುನೀತ್ ರಾಜ್ಕುಮಾರ್ ಅವರು ಚಾಲನೆ ನೀಡಿದರು. ಇದಕ್ಕೂ ಮುನ್ನ ಕಂಬಳ ಕರೆಗಳಿಗೆ ಭಾಗಿಯಾಗಿದ್ದ ಗಣ್ಯರು ಪೂಜೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಮಾಜಿ ಸಿಎಂ ಬಿಎಸ್ ಯಡಿಯೂರಪ್ಪ, ಸಂಸದೆ ಶೋಭಾಕರಂದ್ಲಾಜೆ, ಸಂಗೀತ ನಿರ್ದೇಶದ ಗುರು ಕಿರಣ್, ಸಂಸದ ಪಿಸಿ ಮೋಹನ್, ಡಿ.ವಿ ಸದಾನಂದಗೌಡ, ವಿಶ್ವನಾಥ್ ಸೇರಿದಂತೆ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ಕಂಬಳ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಮಾಜಿ ಸಿಎಂ ಬಿಎಸ್ವೈಕಂಬಳದ ಕಾರ್ಯಕ್ರಮದಲ್ಲಿ ಜಮ್ಮುಕಾಶ್ಮೀರದಲ್ಲಿ ವೀರಮರಣ ಹೊಂದಿದ್ದ ಯೋಧ ಎಂವಿ ಪ್ರಾಂಜಲ್ ಅವರಿಗಾಗಿ ಒಂದು ನಿಮಿಷ ಮೌನಾಚರಣೆ ಮಾಡಲಾಯಿತು. ಇನ್ನು ಕರಾವಳಿಯ ಮಣ್ಣಿನ ಸಂಸ್ಕೃತಿ ಹಾಗೂ ಪ್ರತಿಷ್ಠೆಯ ಪ್ರತೀಕವಾಗಿರುವ ಕಂಬಳವನ್ನು ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಬೆಂಗಳೂರಿನಲ್ಲಿ ನಡೆಯುತ್ತಿದೆ. ಈಗಾಗಲೇ ಕೋಣಗಳು ಸ್ಪರ್ಧೆಯಲ್ಲಿ ಪಾಲ್ಗೊಂಡಿವೆ. ಸಾಕಷ್ಟು ಸಂಖ್ಯೆಯಲ್ಲಿ ಜನರು ಭಾಗವಹಿಸಿದ್ದಾರೆ.

## ಇಂದು ರಾಜ್ಯದ ಎಲ್ಲ ಶಾಲಾ-ಕಾಲೇಜು, ವಿವಿಗಳಲ್ಲಿ ಸಂವಿಧಾನ ದಿನ ಆಚರಣೆ'



ಬೆಂಗಳೂರು: ನವೆಂಬರ್ 26 ರ ಇಂದು ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳು, ಶಾಲಾ ಕಾಲೇಜು, ಇಲಾಖೆಗಳು ಅರ್ಥಪೂರ್ಣವಾಗಿ ಸಂವಿಧಾನ ದಿನ ಆಚರಣೆ' ಆಚರಿಸಲು ಸೂಚನೆ ನೀಡಲಾಗಿದೆ.

ನವೆಂಬರ್ 26 ಭಾನುವಾರದಂದು ಸಂವಿಧಾನ ದಿನವನ್ನು ಜಿಲ್ಲೆಯಲ್ಲಿ ಅರ್ಥಪೂರ್ಣವಾಗಿ ಆಚರಿಸಲು ಸರ್ಕಾರ ಆದೇಶಿಸಿದ್ದು, ಅದರಂತೆ ಎಲ್ಲ ಇಲಾಖೆಗಳಲ್ಲಿ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ಸಂವಿಧಾನ ದಿನವನ್ನು ಆಚರಿಸುವಂತೆ ನಿರ್ದೇಶನ ನೀಡಲಾಗಿದೆ.

ಎಲ್ಲ ವಿಶ್ವವಿದ್ಯಾಲಯಗಳು, ಶಾಲಾ ಕಾಲೇಜುಗಳು, ನಿಗಮ ಮಂಡಳಿ, ಸ್ಥಳೀಯ ಸಂಸ್ಥೆಗಳ ಕಚೇರಿ, ಸರ್ಕಾರಿ ಅನುದಾನಿತ, ಅನುದಾನರಹಿತ ಶಾಲಾ ಕಾಲೇಜುಗಳು, ತಾಲೂಕಾ ಪಂಚಾಯತ್, ಗ್ರಾಮಪಂಚಾಯತ್ ಕಚೇರಿಗಳು ಮತ್ತು ಸರ್ಕಾರದ ಎಲ್ಲ ಇಲಾಖೆಗಳು ತಮ್ಮ ಹಾಗೂ ತಮ್ಮ ಅಧೀನದ ಎಲ್ಲಾ ಜಿಲ್ಲಾ ಮತ್ತು ತಾಲೂಕಾಮಟ್ಟದ ಕಚೇರಿಗಳಲ್ಲಿ ನವೆಂಬರ್ 26 ರಂದು ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವುದರೊಂದಿಗೆ ಹಾಗೂ ಭಾರತದ ಸಂವಿಧಾನ ಪೀಠಿಕೆಯನ್ನು ಓದುವುದರ ಮೂಲಕ ಸಂವಿಧಾನ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲು ಕ್ರಮ ವಹಿಸುವಂತೆ ತಿಳಿಸಲಾಗಿದೆ.



## ಸೇನಾ ಗೌರವಗಳೊಂದಿಗೆ ನೆರವೇರಿದ ಹುತಾತ್ಮ ಯೋಧ ಕ್ಯಾಪ್ಟನ್ ಎಂ.ವಿ. ಪ್ರಾಂಜಲ್ ಅಂತ್ಯಕ್ರಿಯೆ

ಬೆಂಗಳೂರು: ಜಮ್ಮು-ಕಾಶ್ಮೀರದಲ್ಲಿ ಉಗ್ರರೊಂದಿಗಿನ ಕಾಳಗದಲ್ಲಿ ಹುತಾತ್ಮರಾದ ಕ್ಯಾಪ್ಟನ್ ಎಂವಿ ಪ್ರಾಂಜಲ್ ಅವರ ಅಂತ್ಯ ಕ್ರಿಯೆ ಸೇನಾ ಗೌರವಗಳೊಂದಿಗೆ ಇಂದು ನೆರವೇರಿತು. ಸಾವಿರಾರು ಮಂದಿ ಆಗಮಿಸಿ ಹುತಾತ್ಮರಾದ ವೀರಯೋಧನಿಗೆ ಅಂತಿಮ ನಮನ ಸಲ್ಲಿಸಿದರು. ಅಮರ್ ರಹೇ ಘೋಷಣೆಯೊಂದಿಗೆ ಹುತಾತ್ಮ ಯೋಧನ ಅಂತ್ಯಕ್ರಿಯೆ ನೆರವೇರಿತು. ಶನಿವಾರ ಬೆಳಗ್ಗೆ 8ರಿಂದಲೂ ಜಿಗಣಿ ಸಮೀಪದ ನಂದನವದಲ್ಲಿನ ಪ್ರಾಂಜಲ್ ಅವರ ನಿವಾಸದ ಮುಂಭಾಗದಲ್ಲಿ ಪ್ರಾಂಜಲ್ ಅವರ ಪಾರ್ಥೀವ ಶರೀರವನ್ನು ಸಾರ್ವಜನಿಕರ ದರ್ಶನಕ್ಕೆ ಇಡಲಾಗಿತ್ತು. ಪೊಲೀಸ್ ಮತ್ತು ಮಿಲಿಟರಿ ಪಡೆಗಳು ಹುತಾತ್ಮ ಯೋಧನಿಗೆ ಗೌರವ ವಂದನೆ ಸಲ್ಲಿಸಿದರು. ಗೌರವ ವಂದನೆಯ ನಂತರ ಪಾರ್ಥೀವ ಶರೀರವನ್ನು ಪ್ರಾಂಜಲ್ ಅವರ ಮನೆಗೆ ಕೊಂಡೊಯ್ಯಲಾಯಿತು. ಕುಟುಂಬ ಸದಸ್ಯರು ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸಿದ ಬಳಿಕ ಸೋಮಸುಂದರಪಾಳ್ಯದಲ್ಲಿನ ವಿದ್ಯುತ್ ಚಿತಾಗಾರದಲ್ಲಿ ಪ್ರಾಂಜಲ್ ಅವರ ಅಂತ್ಯಕ್ರಿಯೆ ನೆರವೇರಿತು.

## ಬೆಂಗಳೂರು: ತೇಜಸ್ ಯುದ್ಧ ವಿಮಾನದಲ್ಲಿ ಹಾರಾಟ ನಡೆಸಿದ ಪ್ರಧಾನಿ, ಅದ್ಭುತ ಅನುಭವ: ಮೋದಿ

ಬೆಂಗಳೂರು: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಶನಿವಾರ ಬೆಂಗಳೂರಿನಲ್ಲಿ ಸರ್ಕಾರಿ ಸ್ವಾಮ್ಯದ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್‌ಗೆ(ಊಂಐ) ಭೇಟಿ ನೀಡಿದ ಸಂದರ್ಭದಲ್ಲಿ ತೇಜಸ್ ಲಘು ಯುದ್ಧ ವಿಮಾನದಲ್ಲಿ ಹಾರಾಟ ನಡೆಸಿದರು.

ಹೆಚ್ ಎಎಲ್ ನ ಉತ್ಪಾದನಾ ಘಟಕದಲ್ಲಿ ನಡೆಯುತ್ತಿರುವ ಕಾಮಗಾರಿಯನ್ನು ಪರಿಶೀಲಿಸಲು ಪ್ರಧಾನಮಂತ್ರಿ ಅವರು ನಗರಕ್ಕೆ ಬಂದಿದ್ದರು. ತೇಜಸ್ ಯುದ್ಧ ವಿಮಾನ ಸೇರಿದಂತೆ ಹೆಚ್ ಎಎಲ್‌ನ ಉತ್ಪಾದನಾ ಸೌಲಭ್ಯವನ್ನು ಪ್ರಧಾನಿ ತಮ್ಮ ಭೇಟಿ ವೇಳೆ ಸುಮಾರು 45 ನಿಮಿಷಗಳ ಕಾಲ ಪರಿಶೀಲನೆ ನಡೆಸಿದರು.

ಯುದ್ಧ ವಿಮಾನದಲ್ಲಿ ಹಾರಾಟ ನಡೆಸಿದ ಬಳಿಕ ಟ್ವೀಟ್ ಮಾಡಿರುವ ಪ್ರಧಾನ ಮಂತ್ರಿಗಳು, ಇಂದು ತೇಜಸ್ ಯುದ್ಧ ವಿಮಾನದಲ್ಲಿ ಹಾರಾಟ ನಡೆಸಿದೆ. ನಮ್ಮ ಕಠಿಣ ಪರಿಶ್ರಮ ಮತ್ತು ಸಮರ್ಪಣಾ ಮನೋಭಾವದಿಂದಾಗಿ ಸ್ವಾವಲಂಬನೆಯ ಕ್ಷೇತ್ರದಲ್ಲಿ ಜಗತ್ತಿನ ಯಾವ ದೇಶಕ್ಕಿಂತ ನಾವು ಕಡಿಮೆಯಿಲ್ಲ



ಎಂದು ನಾನು ಅಪಾರ ಹೆಮ್ಮೆಯಿಂದ ಹೇಳಬಲ್ಲೆ. ಭಾರತೀಯ ವಾಯುಪಡೆ, ಡಿಆರ್ ಡಿಒ ಮತ್ತು ಹೆಚ್ ಎಎಲ್ ಮತ್ತು ಎಲ್ಲಾ ಭಾರತೀಯರಿಗೆ ಮನದಾಳದ ಅಭಿನಂದನೆಗಳು.

ತೇಜಸ್ ಯುದ್ಧ ವಿಮಾನದಲ್ಲಿ ಒಂದು ಪಯಣವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಈ ಅನುಭವ ವಿಸ್ಮಯಕಾರಿಯಾಗಿತ್ತು. ನಮ್ಮ ದೇಶದ ರಕ್ಷಣಾ ಕ್ಷೇತ್ರದಲ್ಲಿ ಸ್ಥಳೀಯ ಉತ್ಪನ್ನಗಳ ಸಾಮರ್ಥ್ಯಗಳಲ್ಲಿ ನನ್ನ ವಿಶ್ವಾಸ ಖಂಡಿತಾ ಹೆಚ್ಚಾಗಿದೆ. ನಮ್ಮ ರಾಷ್ಟ್ರದ ಸಾಮರ್ಥ್ಯದ ಬಗ್ಗೆ ನನ್ನಲ್ಲಿ ಹೆಮ್ಮೆಯ ಭಾವ ಮತ್ತು ಆಶಾಭಾವನೆ ಹೆಚ್ಚಾಗಿದೆ ಎಂದರು.

2014ರಲ್ಲಿ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್ ಡಿಎ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ರಕ್ಷಣಾ ಉತ್ಪನ್ನಗಳ ಸ್ವದೇಶಿ ಉತ್ಪಾದನೆಗೆ ಒತ್ತಾಯಿಸುತ್ತಾ ಬಂದಿದೆ. ಕೇಂದ್ರ ಸರ್ಕಾರವು ಆತ್ಮ ನಿರ್ಭರ ಭಾರತ ಯೋಜನೆಯಡಿ ಸ್ವದೇಶಿ ರಕ್ಷಣಾ ವಸ್ತು, ತಂತ್ರಜ್ಞಾನಗಳ ಉತ್ಪಾದನೆ ಮತ್ತು ರಫ್ತುಗಳನ್ನು ಹೆಚ್ಚಿಸಿದೆ.

ಲಘು ಯುದ್ಧ ವಿಮಾನವಾದ ತೇಜಸ್ ನ್ನು ಖರೀದಿಸಲು ಹಲವಾರು ದೇಶಗಳು ಆಸಕ್ತಿ ತೋರಿಸಿವೆ. ಅಮೆರಿಕಾ ರಕ್ಷಣಾ ದೈತ್ಯ ಜಿಇ ಏರೋಸ್ಪೇಸ್ ಎಂಕೆ-ಖಋ-ತೇಜಸ್‌ಗಾಗಿ ಜಂಟಿಯಾಗಿ ಎಂಜಿನ್‌ಗಳನ್ನು ಉತ್ಪಾದಿಸಲು ಹೆಚ್ ಎಎಲ್ ನೊಂದಿಗೆ ಒಪ್ಪಂದ ಮಾಡಿಕೊಂಡಿದೆ.

2022-2023ರ ಆರ್ಥಿಕ ವರ್ಷದಲ್ಲಿ ಭಾರತದ ರಕ್ಷಣಾ ರಫ್ತು ಸಾರ್ವಕಾಲಿಕ ಗರಿಷ್ಠ 15,920 ಕೋಟಿ ರೂಪಾಯಿಗೆ ತಲುಪಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಈ ವರ್ಷದ ಏಪ್ರಿಲ್‌ನಲ್ಲಿ ಹೇಳಿದ್ದರು. ಇದು ದೇಶಕ್ಕೆ ಗಮನಾರ್ಹ ಸಾಧನೆಯಾಗಿದೆ ಎಂದು ಹೇಳಿದರು.

## ಕಂಬಳ ಆಯೋಜಕರಿಗೆ 50 ಸಾವಿರ ದಂಡ ವಿಧಿಸಿದ ಬಿಬಿಎಂಪಿ


ಬೆಂಗಳೂರು: ಮೊಟ್ಟ ಮೊದಲ ಬಾರಿಗೆ ಸಿಲಿಕಾನ್ ಸಿಟಿಯಲ್ಲಿ ಕರಾವಳಿ ಪ್ರಸಿದ್ಧ ಕಂಬಳವನ್ನು ಆಯೋಜನೆ ಮಾಡಿದ್ದು, ಆದರೆ ಬಿಬಿಎಂಪಿ ಆಯೋಜಕರಿಗೆ ಬಿಗ್ ಶಾಕ್ ನೀಡಿದೆ. ಬ್ಯಾನರ್, ಬಂಟಿಂಗ್ಸ್ ಹಾಗೂ ಇತರೆ ಪ್ರದರ್ಶನಾ ಫಲಕಗಳನ್ನು ಅಳವಡಿಕೆ ಮಾಡಿ ಜಾಹೀರಾತು ಕೊಡಲಾಗಿದೆ. ಈ ಹಿನ್ನೆಲೆಯಲ್ಲಿ ಬಿಬಿಎಂಪಿ ಅಧಿಕಾರಿಗಳು ಕಂಬಳ ಆಯೋಜಕರಿಗೆ ಬರೋಬ್ಬರಿ 50 ಸಾವಿರ ರೂ. ದಂಡವನ್ನು ವಿಧಿಸಿದ್ದಾರೆ.

ರಾಜ್ಯ ಇತಿಹಾಸದಲ್ಲಿ ಮೊದಲ ಬಾರಿಗೆ ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಕಂಬಳವನ್ನು ಆಯೋಜನೆ ಮಾಡಲಾಗುತ್ತಿದೆ. ಕಳೆದೊಂದು ವಾರದಿಂದ ಭರ್ಜರಿ ಸಿದ್ಧತೆ ಮಾಡಲಾಗಿದ್ದು, ಇಂದು ಕಂಬಳವನ್ನು ಆರಂಭಿಸಲಾಗಿದೆ. ಆದರೆ, ಇಂದು ಕಂಬಳ ಆಯೋಜನೆ ಮಾಡಿದವರು ಬಿಬಿಎಂಪಿಯ ಜಾಹೀರಾತು ನಿಯಮವನ್ನು ಉಲ್ಲಂಘನೆ ಮಾಡಲಾಗಿದೆ.

ಅರಮನೆ ಮೈದಾನ ಹಾಗೂ ಮೈದಾನದ ಸುತ್ತಲಿನ ಪ್ರದೇಶದಲ್ಲಿ ಬ್ಯಾನರ್, ಬಂಟಿಂಗ್ಸ್ ಹಾಗೂ ಇತರೆ ಪ್ರದರ್ಶನಾ ಫಲಕಗಳನ್ನು ಅಳವಡಿಕೆ ಮಾಡಿ ಜಾಹೀರಾತು ಕೊಡಲಾಗಿದೆ. ಈ ಹಿನ್ನೆಲೆಯಲ್ಲಿ ಬಿಬಿಎಂಪಿ ಅಧಿಕಾರಿಗಳು ಕಂಬಳ ಆಯೋಜಕರಿಗೆ ಬರೋಬ್ಬರಿ 50 ಸಾವಿರ ರೂ. ದಂಡವನ್ನು ವಿಧಿಸಿದ್ದಾರೆ. ಇನ್ನು ಕಂಬಳ ಆಯೋಜನೆ ಮಾಡಿರುವುದಕ್ಕೆ ಶುಭಾಶಯ ಕೋರಿ ವಿವಿಧ ನಾಯಕರು ಬ್ಯಾನರ್ ಹಾಗೂ ಬಂಟಿಂಗ್ಸ್‌ಗಳನ್ನು ಅಳವಡಿಕೆ ಮಾಡಿದ್ದರು. ಹೀಗಾಗಿ, ಬಿಬಿಎಂಪಿ ಅಧಿಕಾರಿಗಳು ಕಂಬಳ ಆಯೋಜಕರಿಗೆ 50 ಸಾವಿರ ದಂಡ ವಿಧಿಸಿದ್ದಾರೆ. ಬಳ್ಳಾರಿ ರಸ್ತೆಯ ಪಕ್ಕದಲ್ಲಿ ಫ್ಲೆಕ್ಸ್ ಬ್ಯಾನರ್ ಹಾಕಲಾಗಿದೆ. ಈ ಕುರಿತು ಕಂಬಳ ಆಯೋಜಕರ ವಿರುದ್ಧ ಸದಾಶಿವ ನಗರ ಠಾಣೆಗೆ ದೂರು ದಾಖಲು ಮಾಡಲಾಗಿದೆ.

## ಬಿಜೆಪಿ ಜತೆ ನನ್ನ ಸಂಬಂಧ ಮುಗಿದ ಅಧ್ಯಾಯ: ಜನಾರ್ದನ ರೆಡ್ಡಿ

ಬೆಂಗಳೂರು: ಬಿಜೆಪಿ ಜತೆ ನನ್ನ ಸಂಬಂಧ ನೂರಕ್ಕೆ ನೂರು ಮುಗಿದ ಅಧ್ಯಾಯ ಎಂದು ಗಂಗಾವತಿ ಕ್ಷೇತ್ರದ ಕೆಆರ್‌ಪಿ ಶಾಸಕ ಗಾಲಿ ಜನಾರ್ದನ ರೆಡ್ಡಿ ಹೇಳಿದರು.



ವಿಧಾನಸಭೆ ಚುನಾವಣೆಯಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಬಿಜೆಪಿಗೆ ಗಾಲಿ ಜನಾರ್ದನ ರೆಡ್ಡಿ ಅವರು ಕಟ್ಟಿದ ಕೆಆರ್‌ಪಿ ಪಕ್ಷ ದೊಡ್ಡ ಹೊಡೆತ ನೀಡಿತ್ತು. ಇದರಿಂದಾಗಿ ಎಚ್ಚೆತ್ತ ಬಿಜೆಪಿ, ಗಾಲಿ ಜನಾರ್ದನ ರೆಡ್ಡಿ ಅವರನ್ನು ಪಕ್ಷಕ್ಕೆ ಮರು ಸೇರ್ಪಡೆ ಮಾಡಲು ಮುಂದಾಗಿದ್ದಾರೆ.

ಈ ಬಗ್ಗೆ ಬೆಂಗಳೂರಿನಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಜನಾರ್ದನ ರೆಡ್ಡಿ, ಬಿಜೆಪಿಗೆ ಮರಳಿ ಹೋಗುವುದನ್ನು ನಾನು ಕನಸು ಮನಸಿನಲ್ಲೂ ಯೋಚನೆ ಮಾಡಲ್ಲ.

ಕೆಆರ್‌ಪಿ ಪಕ್ಷದ ಸ್ಥಾಪಿಸಿದಾಗ ಯಾರೆಲ್ಲಾ ಎಷ್ಟೇ ಪ್ರಯತ್ನಿಸಿದರೂ ಯಾರ ಜೊತೆಗೂ ನಾನು ಹೊಂದಾಣಿಕೆ ಮಾಡಿಕೊಳ್ಳಲಿಲ್ಲ. ಸ್ವತಂತ್ರವಾಗಿಯೇ ನಾನು ಮುಂದೆ ಹೋಗುತ್ತೇನೆ ಎಂದರು.

ಲೋಕಸಭಾ ಚುನಾವಣೆ ದೃಷ್ಟಿಯಿಂದ ಯಾರೂ ನನ್ನ ಸಂಪರ್ಕ ಮಾಡಿಲ್ಲ, ನಾನೂ ಯಾರನ್ನೂ ಸಂಪರ್ಕ ಮಾಡಿಲ್ಲ. ನಾನು ಲೋಕಸಭಾ ಚುನಾವಣೆಗೆ ಸ್ಪರ್ಧೆ ಮಾಡುವುದಿಲ್ಲ. ಆದರೆ, ಎಂಟು ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ಕೆಲಸ ಮಾಡುತ್ತೇನೆ ಎಂದರು.

ಬಿಜೆಪಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ನನ್ನ ಸಹಾಯ ಕೇಳುವ ಪರಿಸ್ಥಿತಿ ಇಂದು ಇಲ್ಲ. ಯಡಿಯೂರಪ್ಪ ಅವರನ್ನು ತಂದೆಯ ಸ್ಥಾನದಲ್ಲಿ ಗೌರವಿಸಿದರೆ, ಶ್ರೀರಾಮುಲು ಅವರನ್ನು ಮಗು ರೂಪದಲ್ಲಿ ನೋಡುತ್ತೇನೆ.

ಅವರು ಆಯಾ ಪಕ್ಷದಲ್ಲಿ ಚೆನ್ನಾಗಿರಲಿ ಎಂದು ಬಯಸುತ್ತೇನೆಯೇ ಹೊರತು ಆಹ್ವಾನ ಮಾಡಲ್ಲ ಎಂದರು.

## ಭ್ರೂಣ ಹತ್ಯೆ: ವೈದ್ಯರು ಸೇರಿ 9 ಜನ ಬಂಧನ



ಬೆಂಗಳೂರು: ನಿರಂತರ ಭ್ರೂಣ ಹತ್ಯೆ ಮಾಡುತ್ತಿದ್ದ ಐವರು ವೈದ್ಯರು ಸೇರಿ 9 ಮಂದಿಯನ್ನು ಬೆಂಗಳೂರು ಪೊಲೀಸರು ಬಂಧಿಸಿದ್ದಾರೆ. ವೈದ್ಯರಾದ ಡಾ. ತುಳಸಿರಾಮ್, ಡಾ. ಚಂದನ್ ಬಲ್ಲಾಳ್, ಮೀನಾ, ಲ್ಯಾಬ್ ಟೆಕ್ನೀಶಿಯನ್ ನಿಸ್ಸಾರ್, ಖಾಸಗಿ ಆಸ್ಪತ್ರೆಯ ರಿಸೆಪ್ಶನಿಷ್ಟ್ ರೀಜ್ಮಾ, ಶಿವನಂಜೇಗೌಡ, ವೀರೇಶ್, ನವೀನ್ ಮತ್ತು ನಯನ್ ಬಂಧಿತರು. ಪ್ರಾರಂಭದಲ್ಲಿ ಭ್ರೂಣ ಹತ್ಯೆ ಆರೋಪದ ಮೇಲೆ ಶಿವನಂಜೇಗೌಡ, ವೀರೇಶ್, ನವೀನ್ ಮತ್ತು ನಯನ್ ಎಂಬವರನ್ನು ಬಂಧಿಸಿದ್ದು, ಬಳಿಕ ಅವರನ್ನು ವಿಚಾರಣೆಗೆ ಒಳಪಡಿಸಿದ ಬಳಿಕ ವೈದ್ಯರ ಹೆಸರು ಬಹಿರಂಗವಾಗಿದೆ. ಮೈಸೂರಿನ ಉದಯಗಿರಿಯಲ್ಲಿರುವ ಆಸ್ಪತ್ರೆಯೊಂದರಲ್ಲಿ ಈ ಆರೋಪಿಗಳು ಪ್ರತಿ ತಿಂಗಳು 20 ರಿಂದ 25 ಭ್ರೂಣ ಹತ್ಯೆ ಮಾಡುತ್ತಿದ್ದರು ಎನ್ನಲಾಗಿದ್ದು, ಪ್ರಕರಣ ದಾಖಲಿಸಿರುವ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

## ನವೆಂಬರ್ 27 ರಂದು ಮುಖ್ಯಮಂತ್ರಿಗಳಿಂದ ಜನತಾ ದರ್ಶನ, ನಿಮ್ಮ ಸಮಸ್ಯೆಗೆ ಸಿಗುತ್ತೆ ಪರಿಹಾರ

ಬೆಂಗಳೂರು: ಲೋಕಸಭೆ ಚುನಾವಣೆಗೂ ಮುನ್ನ ಜನರ ತಲುಪಲು ಯತ್ನಿಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನವೆಂಬರ್ 27 ರಂದು ಬೆಂಗಳೂರಿನ ತಮ್ಮ ಅಧಿಕೃತ ನಿವಾಸದಲ್ಲಿ ಒಂದು ದಿನದ ಜನತಾದರ್ಶನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ.

2013 ಮತ್ತು 2018 ರ ನಡುವೆ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರು, ಈ ವೇಳೆ ಕೆಲ ಗಂಟೆಗಳ ಕಾಲ ಆಗಿದ್ದಾಗ ಜನತಾದರ್ಶನ ನಡೆಸುತ್ತಿದ್ದರು. ಆದರೆ, ಈ ಬಾರಿ ಬೆಳಗ್ಗೆ 10ರಿಂದ ಸಂಜೆ 6ರವರೆಗೆ ನಡೆಸಲಿದ್ದಾರೆಂದು ಮುಖ್ಯಮಂತ್ರಿಗಳ ಕಚೇರಿ ಮೂಲಗಳು ಮಾಹಿತಿ ನೀಡಿವೆ.

ಈ ಬಗ್ಗೆ ಮುಖ್ಯಮಂತ್ರಿಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯೆಲ್ ಅವರು ಎಲ್ಲಾ ಜಿಲ್ಲಾಪಂಚಾಯತಿಗಳ ಡಿಸಿಗಳು ಮತ್ತು ಸಿಇಒಗಳಿಗೆ ಪತ್ರ ಬರೆದಿದ್ದು, ನವೆಂಬರ್ 27 ರಂದು ಮುಖ್ಯಮಂತ್ರಿಗಳು ಜನತಾದರ್ಶನ ನಡೆಸಲಿದ್ದು,



ಈ ವೇಳೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಪಾಲ್ಗೊಳ್ಳುವ ನಿರೀಕ್ಷೆಯಿದೆ. ಮುಖ್ಯಮಂತ್ರಿಗಳು ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳ ಸಂಪರ್ಕಿಸಿ ಜನರ ಸಮಸ್ಯೆಗಳ ಪರಿಹರಿಸುವಂತೆ ನಿರ್ದೇಶನ ನೀಡಬಹುದು. ಹೀಗಾಗಿ ಎಲ್ಲಾ ಡಿಸಿಗಳು, ಜಿಲ್ಲಾ ಪಂಚಾಯತ್ ಸಿಇಒಗಳು, ಎಸ್ಪಿಗಳು ಮತ್ತು ಇತರ ಅಧಿಕಾರಿಗಳು ತಮ್ಮ ಕೇಂದ್ರಗಳಲ್ಲಿ ಹಾಜರಿರಬೇಕು. ಸಿಎಂ ಕಚೇರಿಯಿಂದ ಕರೆಗಳು ಬಂದ ಕೂಡಲೇ ಸ್ವೀಕರಿಸಬೇಕು ಎಂದು ತಿಳಿಸಿದ್ದಾರೆ.

## ಅಯ್ಯೋ ಇದು ನ್ಯಾಯವೇ?

### ಸರ್ವ ಮಾಲಿಕ್ಯತ್ವ ದಿನಪತ್ರಿಕೆ ಸಂಪಾದಕರ ಗಮನಕ್ಕೆ




ಬೆಳಗಾವಿ: ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು ಎನ್ನುವ ಸಿದ್ಧರಾಮಯ್ಯ ಸರ್ಕಾರದ ನಡೆ ಈಗ ಅನುಮಾನಕ್ಕೆ ಆಸ್ಪದ ಮಾಡಿಕೊಟ್ಟಿದೆ. ಮಾಧ್ಯಮ ಪಟ್ಟಿಯಲ್ಲಿರುವ ದಿನಪತ್ರಿಕೆಗಳಿಗೆ ಜಾಹೀರಾತು ನೀಡುತ್ತಿರುವ ವಿಷಯದಲ್ಲಿ ಮಾಡುತ್ತಿರುವ ತಾರತಮ್ಯ ಇದು ಅಕ್ಷೇಪರ.

ಏಕೆಂದರೆ ಸಂವಿಧಾನ ದಿನಾಚರಣೆಯ ಜಾಹೀರಾತುಗಳನ್ನು ಮಾಧ್ಯಮ ಪಟ್ಟಿಯಲ್ಲಿರುವ ಸರ್ವ ಪತ್ರಿಕೆಗಳಿಗೆ ಜಾಹಿರಾತು ನೀಡುವುದು ಸಮಾನತೆ. ಆದರೆ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಹಾಗೂ ಬ್ರಾಹ್ಮಣರು ಓಬಿಸಿ ಹಿಂದುಳಿದ ವರ್ಗಗಳ ಮಾಲಿಕ್ಯತ್ವದ ಪತ್ರಿಕೆ ಸಂಪಾದಕತ್ವದ ಜಾಹೀರಾತು ಎಂದು ಹೇಳಿ ಮಾಧ್ಯಮ ಪಟ್ಟಿಯಲ್ಲಿರುವ ಪತ್ರಿಕೆಗಳಿಗೆ ಈ ಜಾಹೀರಾತು ವಿಷಯದಲ್ಲಿ ತಾರತಮ್ಯ ಮಾಡುತ್ತಿರುವುದು ಅಕ್ಷೇಪರ ಸಂಗತಿ ಮಾಧ್ಯಮ ಪಟ್ಟಿಯಲ್ಲಿರುವ ದಿನಪತ್ರಿಕೆಗಳಿಗೆ ಸಂವಿಧಾನ ದಿನಾಚರಣೆಯ ಜಾಹಿರಾತು ವಿಷಯದಲ್ಲಿ ಮಾಧ್ಯಮ ಪಟ್ಟಿಯಲ್ಲಿರುವ ದಿನಪತ್ರಿಕೆ ಮಾಲಿಕ್ಯತ್ವದ ಹಾಗೂ ಸಂಪಾದಕತ್ವ ಸಂಪಾದಕರುಗಳು ಮಾಧ್ಯಮ ಪಟ್ಟಿಯಲ್ಲಿರುವ ನಾವು ವಂಚಿತರಾಗಿದ್ದೇವೆ. ಇದಲ್ಲದೆ ಓಬಿಸಿ ಮಾಲಿಕ್ಯತ್ವದ ಸಂಪಾದಕರಿಗೆ ಬರಬೇಕಾಗಿದ್ದ ಒಂದು ಪುಟ ಜಾಹಿರಾಥದಲ್ಲಿಯೂ ಕೂಡಾ ಇದೇ ಜಾಹಿರಾತನ್ನು ಅಡ್‌ಜಸ್ಟ್ ಮಾಡಿ ಕೊಡಲಾಗಿದೆ ಇಲ್ಲೂ ಅವರಿಗೂ ಕೂಡ ಅನ್ಯಾಯವಾದಂತಾಗಿದೆ.

ಏನೇ ಆಗಲಿ ಮಾಧ್ಯಮ ಪಟ್ಟಿಯಲ್ಲಿರುವ ಎಲ್ಲ ಪತ್ರಿಕೆಗಳಿಗೂ ಕೂಡಾ ಸಂವಿಧಾನದ ದಿನಾಚರಣೆಯ ಜಾಹೀರಾತವನ್ನು ಎಲ್ಲ ದಿನಪತ್ರಿಕೆಗಳಿಗೆ ನೀಡಬೇಕಾಗಿತ್ತು. ಮಾಧ್ಯಮ ಪಟ್ಟಿಯಲ್ಲಿರುವ ಪತ್ರಿಕೆಗಳ ಸಂಪಾದಕತ್ವದ ಮಾಲಿಕತ್ವದವರಿಗೆ ಅನ್ಯಾಯವಾದಂತಾಗಿದೆ.

**ಆದರೆ ಏನೇ ಆಗಲಿ ಇದು ನ್ಯಾಯವೇ?**

ಅದಕ್ಕಾಗಿ ಆದಷ್ಟು ಬೇಗನೆ ಪತ್ರಿಕೆ ಸಂಪಾದಕರನ್ನು ಉಳಿಸುವ ಕೆಲಸ ಸಿದ್ದರಾಮಯ್ಯ ಸರ್ಕಾರದ ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು ಅನ್ನುವ ವಾಕ್ಯವನ್ನು ಸಿದ್ದರಾಮಯ್ಯ ಸರಕಾರ ಪಾಲಿಸುತ್ತದೆಯೋ? ಹಾಗೂ ಮಾನ್ಯ ಆಯುಕ್ತರು ವಾರ್ತಾ ಮತ್ತು ಸಾರ್ವಜನಿಕ ಪ್ರಚಾರ ಇಲಾಖೆಯವರು ಸರ್ವರಿಗೂ ಸಮಾನತೆ ಕಾಪಾಡುವಲ್ಲಿ ಯಶಸ್ವಿಯಾಗ್ತಾರೋ ಇಲ್ಲವೆಂದು ನಾವು ಕೂಡ ಕಾದು ನೋಡಬೇಕಾಗಿದೆ. ಹಾಗೂ ಈ ವಿಷಯವಾಗಿ ಬೆಳಗಾವಿಯ ಉಪ ನಿರ್ದೇಶಕರು ವಾರ್ತಾ ಮತ್ತು ಸಾರ್ವಜನಿಕ ಪ್ರಚಾರ ಇಲಾಖೆ ರವರು ಸ್ಪಷ್ಟೀಕರಣ ನೋಡಬೇಕಾಗಿದ್ದು ಅವಶ್ಯಕತೆ ನೀಡಬೇಕಾಗಿದ್ದು ಅವಶ್ಯಕವಾಗಿದೆ.

ಒಂದು ವೇಳೆ ನೀಡದಿದ್ದಲ್ಲಿ ಮುಂಬರುವ ಚಳಿಗಾಲ ಅಧಿವೇಶನದಲ್ಲಿ ಈ ವಿಷಯವಾಗಿ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ತುಮಕೂರಿನಿಂದ ವಿ.ಸೋಮಣ್ಣ ಸ್ಪರ್ಧೆ ವಿಚಾರ: ಯೂ ಟರ್ನ್ ಹೊಡೆದ ಬಸವರಾಜ್

ತುಮಕೂರು: ಮಾಜಿ ಸಚಿವ ವಿ.ಸೋಮಣ್ಣರಿಗೆ ಟಿಕೆಟ್ ನೀಡಿದರೆ ಶಿರಸಾ ವಹಿಸಿ ಕೆಲಸ ಮಾಡುತ್ತೇವೆ ಎಂದು ಸಂಸದ ಜಿ.ಎಸ್ ಬಸವರಾಜ್ ತಿಳಿಸಿದರು.



ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿ.ಸೋಮಣ್ಣ ಇಲ್ಲಿ ಎರಡು ಬಾರಿ ಜಿಲ್ಲಾ ಮಂತ್ರಿ ಆಗಿದ್ದವರು. ದೇವೆಗೌಡರ ವಿರುದ್ಧ ನನ್ನ ಚುನಾವಣೆಯಲ್ಲಿ ಉಸ್ತುವಾರಿ ಆಗಿದ್ದರು. ನೂರಕ್ಕೆ ನೂರು ನನ್ನ ಭವಿಷ್ಯ ಅವರ ಮೇಲಿತ್ತು. ನನ್ನ ಗೆಲ್ಲಿಸಿದರು ಎಂದರು.

ತುಮಕೂರು ಲೋಕಸಭೆ ಕ್ಷೇತ್ರದಿಂದ ವಿ.ಸೋಮಣ್ಣಗೆ ಟಿಕೆಟ್ ನೀಡುವಂತೆ ಕೇಳುವಿರಾ ಎಂಬ ಪ್ರಶ್ನೆಗೆ ಬಸವರಾಜ್ ಪ್ರತಿಕ್ರಿಯೆ ನೀಡಿದರು.

ಮುಂದಿನ ತಿಂಗಳು 7 ರಂದು ಸೋಮಣ್ಣ ದೆಹಲಿಗೆ ತೆರಳುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಮುಂದಿನ 7 ರಂದು ನಾನು ದೆಹಲಿಯಲ್ಲಿ ಇರುತ್ತೇನೆ, ಪಾರ್ಲಿಮೆಂಟ್ ಇರುತ್ತದೆ. ಪಾರ್ಟಿ ಯಾರಿಗೆ ಟಿಕೆಟ್ ಕೊಡುತ್ತಾರೋ ಅವರಿಗೆ ಕೆಲಸ ಮಾಡುತ್ತೇವೆ. ಸೋಮಣ್ಣ ಪರ ಬ್ಯಾಟ್ ಬಿಸೋದು ಗಿಸೋದು ಏನು ಅಲ್ಲ ಎಂದು ಸೋಮಣ್ಣ ಪರ ಟಿಕೆಟ್'ಗಾಗಿ ಲಾಬಿ ಮಾಡುವುದಿಲ್ಲ ಎಂದು ಯೂ ಟರ್ನ್ ಹೊಡೆದರು.

ದೆಹಲಿಗೆ ಹೋಗಿ ನಾನು ಇವರಿಗೆ ಸೀಟ್ ಕೊಡಿ ಅಂದರೆ ಕೊಡುತ್ತಾರಾ? ಅದಕ್ಕೆ ನೀತಿ ನಿಯಮವಿದೆ. ಪಾರ್ಲಿಮೆಂಟರಿ ಬೋರ್ಡ್ ಇದೆ. ಯಾವ ರೀತಿ ಅನ್ನುವುದನ್ನು ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಸೋಮಣ್ಣ ಇವತ್ತಿಗೆ ಬಿಜೆಪಿಯಲ್ಲಿದ್ದಾರೆ. ಬಿಜೆಪಿಯಿಂದಲೇ ಅಭ್ಯರ್ಥಿ ಎಂದು ನಿನ್ನೆ ಮೊನ್ನೆಯೋ ಹೇಳಿದ್ದಾರೆ. ತುಮಕೂರಿಗೆ ನಿಲ್ಲುವುದಾಗಿ ಹೇಳಿದ್ದಾರೆ ಎಂದರು.

ಸೋಮಣ್ಣಗೆ ಕಾಂಗ್ರೆಸ್‌ನಿಂದ ಆಹ್ವಾನವಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ನನ್ನನ್ನೂ ಕಾಂಗ್ರೆಸ್‌ಗೆ ಕರಿತಾರೆ. ಬಿಜೆಪಿಯಲ್ಲಿ ವಯಸ್ಸಿನ ಮಿತಿಯಿದೆ, ನಮ್ಮಲ್ಲಿ ಏನು ಇಲ್ಲ, ಬಾ ಅಂತಾರೆ. ನನ್ನದು 1939 ಹುಟ್ಟಿದ ವರ್ಷ, ವಯಸ್ಸು ಆಗಿದೆ. ಚುನಾವಣೆಗೆ ನಿಲ್ಲುವುದಿಲ್ಲ ಎಂದು ಹೇಳಿದ್ದೇನೆ. ನಾನೇ ನಿಂತರೆ ಮುಂದಿನ ಜನರೇಷನ್ ಯಾರು ಬರಬಾರದಾ ಎಂದು ಪ್ರಶ್ನಿಸಿದರು.

ತುಮಕೂರು ಕ್ಷೇತ್ರದಲ್ಲಿ ಸೋಮಣ್ಣಗೆ ಉತ್ತಮವಾದ ವಾತವರಣ ಇದೆ. ಮುದ್ದಹನುಮೇಗೌಡ ಆ ಪಾರ್ಟಿ, ಈ ಪಾರ್ಟಿಯಲ್ಲಿದ್ದರು. ಹೋದ ವರ್ಷ ಬ್ರೇಕ್ ಆಯ್ತು. ಏನೇನೋ ಇರುತ್ತೆ ನಮಗೇನು? ಯಾರಿಗೆ ಟಿಕೆಟ್ ಅಂತಾ ಹೈಕಮಾಂಡ್ ಗೆ ಬಿಟ್ಟದ್ದು. ಮುದ್ದಹನುಮೇಗೌಡರು ನನ್ನ ವಿರುದ್ಧ ಗೆದ್ದರು, ಆದರೂ ನಾವು ಚೆನ್ನಾಗಿ ಇದ್ದೀವಿ. ಸೋಮಣ್ಣರಿಗೆ ನಾನು ಸಪೋರ್ಟ್ ಮಾಡ್ತೀನಿ ಎಂದು ಬಸವರಾಜ್ ಸ್ಪಷ್ಟಪಡಿಸಿದರು.

## ಆನ್ಲೈನ್ ಗೇಮಿಗೆ ಬೆಳಗಾವಿ ಕಂಟೋನ್ಮೆಂಟ್ ಸಿಇಓ ಆನಂದ್ ಬಲಿ



ಬೆಳಗಾವಿ: ಈ ಆನ್ ಲೈನ್ ಗ್ಯಾಮ್ಲಿಂಗ್ ಗೇಮ್ ಗಳೇ ಹಾಗೇ ಒಂದು ಬಾರಿ ನೀವು ಅದರಲ್ಲಿ ಇಳಿದ್ರೇ ಮುಗಿಯುತು ಮತ್ತೆ ಎದ್ದು ಬಂದ ಉಧಾಹರಣೆಗಳೇ ಇಲ್ಲಾ. ಜನ ಸಾಮಾನ್ಯರಿಗೆ ತಿಳಿ ಹೇಳಬೇಕಿದ್ದ ಅಧಿಕಾರಿಯೊಬ್ಬರು ಇದೇ ಆನ್ ಲೈನ್ ಗ್ಯಾಮ್ಲಿಂಗ್ ಗೆ ಬಲಿಯಾಗಿದ್ದಾರೆ.

ರಕ್ಷಣಾ ಇಲಾಖೆಯ ಅಡಿಯಲ್ಲಿ ಸಿಇಒ ಆಗಿ ಕೆಲಸ ಮಾಡ್ತಿದ್ದ ಅಧಿಕಾರಿ ಡೆತ್ ನೋಟ್ ಬರೆದಿಟ್ಟು ಮಾಡಿಕೊಂಡಿದ್ದೇನೂ? ತನ್ನ ತಂದೆ ತಾಯಿಗೆ ಕೊನೆಯಲ್ಲಿ ಹೇಳಿದ್ದೇನೂ? ಸಿಬಿಐ ದಾಳಿಯಾದ ನಾಲ್ಕೇ ದಿನಕ್ಕೆ ಅಧಿಕಾರಿ ಸಾವಿನ ದಾರಿ ಹಿಡಿದಿದ್ದ ಅಧಿಕಾರಿಯ ಹೆಸರು ಕೆ. ಆನಂದ ಅಂತಾ ರಕ್ಷಣಾ ಇಲಾಖೆಗೆ ಒಳಪಡುವ ಬೆಳಗಾವಿಯ ದಂಡು ಮಂಡಳಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಆಗಿ ಕಳೆದ ಒಂದೂವರೆ ವರ್ಷದಿಂದ ಕರ್ತವ್ಯ ನಿರ್ವಹಿಸುತ್ತಿದ್ದರು.

ಹೀಗಿದ್ದ ಅಧಿಕಾರಿ ಇಂದು ಬೆಳಗ್ಗೆ ಕ್ಯಾಂಪ್ ಪ್ರದೇಶದಲ್ಲಿರುವ ತಮ್ಮದೇ ಸರ್ಕಾರಿ ನಿವಾಸದಲ್ಲಿ ಶವವಾಗಿ ಪತ್ತೆಯಾಗಿದ್ದರು. ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಕ್ಯಾಂಪ್ ಠಾಣೆ ಪೊಲೀಸರಿಗೆ ಇದೊಂದು ಆತ್ಮಹತ್ಯೆ ಎಂಬುದು ಮೇಲ್ನೋಟಕ್ಕೆ ಕಂಡು ಬಂದಿತ್ತು. ಇನ್ನೂ ಮರಾಠಾ ಲಘು ಪದಾತಿ ದಳದ ಬ್ರಿಗೇಡಿಯರ್ ಸೇರಿದಂತೆ ಸೇನೆಯ ಅಧಿಕಾರಿಗಳು ಕೂಡ ಸ್ಥಳಕ್ಕೆ ಬಂದು ಭೇಟಿ ನೀಡಿ ರಕ್ಷಣಾ ಇಲಾಖೆ ಮೇಲಾಧಿಕಾರಿಗಳಿಗೆ ಸುದ್ದಿ ಮುಟ್ಟಿಸಿದ್ದರು.

ಎರಡು ದಿನಗಳಿಂದ ರೂಮ್ ನಿಂದ ಹೊರ ಬರದ ಆನಂದ ಅವರು ನಿನ್ನೆ ಇಡೀ ದಿನ ಕೂಡ ಊಟ ಸೇರಿದಂತೆ ಏನನ್ನೂ ಸ್ವೀಕರಿಸಿಲ್ಲ. ಆದ್ರೇ ನಿನ್ನೆ ಇಡೀ ದಿನ ಕಾದು ಬೆಳಗ್ಗೆ ಮತ್ತೆ ರೂಮ್ ನ ಬಾಗಿಲು ಬಡೆದಿದ್ದಾರೆ. ಈ ವೇಳೆ ಬಾಗಿಲು ತೆಗೆಯದಿದ್ದಾಗ ಸ್ಥಳೀಯ ಪೊಲೀಸರಿಗೆ ಹಾಗೂ ಎಮ್‌ಎಲ್‌ಆರ್‌ಸಿ ಸೇನೆಯ ಮುಖ್ಯಸ್ಥರಿಗೆ ಸುದ್ದಿ ಮುಟ್ಟಿಸಿದ್ದಾರೆ.

## ನ.27 ರಂದು ಬಳ್ಳಾರಿ ಗ್ರಾಮೀಣ ಜೆಸ್ಕಾಂ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ

ಬಳ್ಳಾರಿ: ಗ್ರಾಮೀಣ ಜೆಸ್ಕಾಂ ವ್ಯಾಪ್ತಿಯಲ್ಲಿನ 220 ಕೆ.ವಿ ಅಲ್ಲೀಪುರ-ಸ್ವೀಕರಣಾ ಕೇಂದ್ರದಲ್ಲಿ 220 ಕೆ.ವಿ ಮಾರ್ಗದ ಉಪಕರಣಗಳನ್ನು ಪರೀಕ್ಷಿಸುವ ಕಾಮಗಾರಿ ತುರ್ತಾಗಿ ಕೈಗೆತ್ತಿಕೊಳ್ಳುತ್ತಿರುವುದರಿಂದ, 220ಕೆ.ವಿ. ಅಲ್ಲಿಪುರ ಸ್ವೀಕರಣ ಕೇಂದ್ರದಿಂದ ಸಂಪರ್ಕ ಹೊಂದಿರುವ 110/33/11ಕೆ.ವಿ ಉಪ-ಕೆಂದ್ರಗಳು ಮತ್ತು ಉಪ-ಕೇಂದ್ರಗಳಿಂದ ಹೊರಹೊಮ್ಮುವ ಎಲ್ಲಾ 33/11ಕೆ.ವಿ ಮಾರ್ಗಗಳಲ್ಲಿ ನ.27 ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಬಳ್ಳಾರಿ ಗ್ರಾಮೀಣ ಜೆಸ್ಕಾಂನ ಸಹಾಯಕ ಇಂಜಿನಿಯರ್ ಮೋಹನಬಾಬು ಅವರು ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳು:

110/11 ಕೆ.ವಿ ವಿದ್ಯುತ್ ಉಪಕೇಂದ್ರಗಳಾದ ದಕ್ಷಿಣ, ಉತ್ತರ, ಹಲಕುಂದಿ, ಮೀನಹಳ್ಳಿ, ಬಿಸಿಲಹಳ್ಳಿ, ಮೋಕ, ಶ್ರೀಧರಗಡ್ಡೆ ಮತ್ತು ಕುರುಗೋಡು. 33/11ಕೆ.ವಿ ವಿದ್ಯುತ್ ಉಪಕೇಂದ್ರಗಳಿಂದ ಗುಡದೂರು, ಎಮ್ಮಿಗನೂರು, ರೂಪನಗುಡಿ, ಯರ್ರಗುಡಿ ಹಾಗೂ 220/11 ಕೆ.ವಿ.ಯ ಅಲ್ಲಿಪುರ ಸ್ವೀಕರಣಾ ಕೇಂದ್ರಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿವಿಧೆಡೆ ವಿದ್ಯುತ್ ವ್ಯತ್ಯಯ

ಬಳ್ಳಾರಿ: ನಗರ ಜೆಸ್ಕಾಂ ಉಪವಿಭಾಗ-1ರ 220/11ಕೆ.ವಿ ವ್ಯಾಪ್ತಿಯಲ್ಲಿ ಅಲ್ಲಿಪುರ ವಿದ್ಯುತ್ ವಿತರಣ ಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ ಬ್ಯಾಂಕ್-2 ಮೇಲೆ ಇರುವ ಫೀಡರ್‌ಗಳ ಸಿ.ಟಿಗಳನ್ನು ಬದಲಾಯಿಸುವ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ನ.27ರಂದು ಬೆಳಿಗ್ಗೆ 11 ರಿಂದ ಸಂಜೆ 4 ಗಂಟೆಯವರೆಗೆ ಎಫ್-34, ಎಫ್-36, ಎಫ್-40, ಎಫ್-62, ಎಫ್-75, ಎಫ್-76, ಎಫ್-77 ಮತ್ತು ಎಫ್-39 ಫೀಡರ್‌ಗಳ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸಹಾಯಕ ಇಂಜಿನಿಯರ್ ಅಶೋಕ ರೆಡ್ಡಿ ಅವರು ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳಿವು:

ರೂಪನಗುಡಿ, ಗ್ರಾಂಡ್ ಫಂಕ್ಷನ್ ಹಾಲ್, ವೆಂಕಟರಮಣ ನಗರ, ನಬೀ ಕಾಲೋನಿ, ಅಂಜಿನಪ್ಪ ನಗರ, ಶ್ರೀರಾಂಪುರ ಕಾಲೋನಿ, ಗೋನಾಳ್, ವರಬಸಪ್ಪ ಗುಡಿ, ವಿನಾಯಕ ನಗರ, ಕಾಂಟೋನ್‌ಮೆಂಟ್, ಐಶ್ವರ್ಯ ಕಾಲೋನಿ, ಐಟಿಐ ಕಾಲೇಜ್, ರೇಡಿಯೋ ಪಾರ್ಕ್, ಕೌಲ್‌ಬಜಾರ್ ಮೇನ್ ರೋಡ್, ಟೈಲರ್ ಬೀದಿ, ಕುವೆಂಪು ನಗರ, ಜಯನಗರ, ಚಂದ್ರ ಕಾಲೋನಿ, ರಾಮಾಂಜನೇಯ ನಗರ, ಸಿ.ಎಮ್.ಸಿ ಕಾಲೋನಿ, ಎಕ್ಸ್ ಸರ್ವಿಸ್‌ಮೆನ್ ಕಾಲೋನಿ, ಅರಣ್ಯ ಕ್ವಾಟರ್ಸ್, ಜಾಗೃತಿ ನಗರ, ಟ್ರಾಮಾ ಕೇರ್ ಸೆಂಟರ್, ವಿಮ್ಸ್ ಆಸ್ಪತ್ರೆ, ಜಲ ಶುದ್ಧೀಕರಣ ಕೇಂದ್ರ, ಕೊಳಗಲ್ಲು ಗ್ರಾಮ ಸೇರಿದಂತೆ ಸುತ್ತ ಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ವಿದ್ಯುತ್ ಗ್ರಾಹಕರು ಹಾಗೂ ಸಾರ್ವಜನಿಕರು ಸಹಕರಿಸಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಲೋಕಸಭೆ ಚುನಾವಣೆಗೆ ಮುನ್ನವೇ ಒಳ ಮೀಸಲಾತಿ ಜಾರಿ: ಕೇಂದ್ರ ಸಚಿವ ಭರವಸೆ



ತುಮಕೂರು: ಮುಂಬರುವ ಲೋಕಸಭೆ ಚುನಾವಣೆಗೆ ಮುನ್ನವೇ ಒಳಮೀಸಲಾತಿ ಜಾರಿಯಾಗಲಿದೆ ಎಂದು ಕೇಂದ್ರ ಸಚಿವ ಎ.ನಾರಾಯಣ ಸ್ವಾಮಿ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಒಳ ಮೀಸಲಾತಿ ಜಾರಿಯಲ್ಲಿ ರಾಜ್ಯ ಸರ್ಕಾರದ ಕೆಲಸ ಏನೂ ಇರುವುದಿಲ್ಲ. ಹಿಂದಿನ ಬಿಜೆಪಿ ಸರ್ಕಾರ ಒಳ ಮೀಸಲಾತಿ ಹೆಚ್ಚಳ ಮಾಡಿತ್ತು. ಅದು ಜಾರಿಯಾಗುತ್ತದೆ ಎಂದರು.

ಲೋಕಸೇವಾ ಆಯೋಗದ ಮೂಲಕ ನೇಮಕಾತಿ ಮಾಡುವ ಉದ್ಯೋಗದಲ್ಲಿ ಮೀಸಲಾತಿ ಘೋಷಣೆ ಮಾಡಬೇಕಿದೆ.

ಒಳ ಮೀಸಲಾತಿಯಲ್ಲಿ ಒಂದು ಹಂತದಲ್ಲಿ ಗೆಲುವು ಸಾಧಿಸಿದ್ದೇವೆ. ಅರುಣ್ ಮಿಶ್ರ ತೀರ್ಪನ್ನು ಸುಪ್ರೀಂಕೋರ್ಟ್ ಒಪ್ಪಿಕೊಂಡಿದೆ.

ವಿಸ್ತೃತ ಪೀಠಕ್ಕೆ ವರ್ಗಾವಣೆ ಸಹ ಆಗಿದೆ. ಹಾಗಾಗಿ ಅರುಣ್ ಮಿಶ್ರಾ ಶಿಫಾರಸ್ಸಿನ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ಚರ್ಚೆ ಆಗುತ್ತದೆ ಎಂದರು.

ಫೆಬ್ರವರಿಯಲ್ಲಿ ಒಳ ಮೀಸಲಾತಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ತೀರ್ಪು ನೀಡಲಿದೆ. ಅದು ಒಳಮೀಸಲಾತಿ ಹೋರಾಟಗಾರರಿಗೆ ಮೊದಲನೇ ಗೆಲುವಾಗಲಿದೆ.

ಅಟಾರ್ನಿ ಜನರಲ್ ಅವರೇ ಒಳ ಮೀಸಲಾತಿ ಪರವಾಗಿ ಇದ್ದಾರೆ. ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಅವರು ಸಹ ಒಪ್ಪಿಗೆ ಸೂಚಿಸಿದ್ದಾರೆ. ಹಾಗಾಗಿ ಇಡೀ ದೇಶದಲ್ಲಿ ಒಳ ಮೀಸಲಾತಿಗೆ ನ್ಯಾಯ ಸಿಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

## ಬೇವಿನ ಎಲೆ ಮಾತ್ರವಲ್ಲ, ಕಾಯಿ ಕೂಡ ಆರೋಗ್ಯಕ್ಕೆ ಒಳ್ಳೆಯದು!



ಬೇವಿನ ಎಲೆಗಳ ಪ್ರಯೋಜನಗಳು ಎಲ್ಲರಿಗೂ ತಿಳಿದಿವೆ. ಆದರೆ ಬೇವಿನ ಕಾಯಿಯಿಂದಾಗುವ ಆರೋಗ್ಯ ಪ್ರಯೋಜನಗಳ ಬಗ್ಗೆ ಕೇಳಿದ್ದೀರಾ? ವಿಟಮಿನ್ ಸಿ, ಉತ್ಕರ್ಷಣ ನಿರೋಧಕಗಳು, ಬ್ಯಾಕ್ಟೀರಿಯಾ ವಿರೋಧಿ ಮತ್ತು ಉರಿಯೂತದ ಗುಣಲಕ್ಷಣಗಳನ್ನು ಹೊಂದಿದೆ.

ಬೇವಿನ ಮರದ ಪ್ರತಿಯೊಂದು ಭಾಗ - ಎಲೆಗಳು, ಕೊಂಬೆಗಳು, ತೊಗಟೆ, ಬೀಜಗಳು, ಬೇರುಗಳು, ಹಣ್ಣುಗಳು, ಹೂವುಗಳು - ಎಲ್ಲವನ್ನೂ ಸಾಂಪ್ರದಾಯಿಕ ಆಯುರ್ವೇದ ಚಿಕಿತ್ಸೆಗಳಲ್ಲಿ ಬಳಸಲಾಗುತ್ತದೆ. ಇದೀಗ ಬೇವಿನ ಕಾಯಿಯ ಆರೋಗ್ಯ ಲಾಭಗಳನ್ನು ನೋಡೋಣ.

ಬಾಯಿ ಹುಣ್ಣು ಬರದಂತೆ ತಡೆಯುತ್ತದೆ ಬಾಯಿಯ ಹುಣ್ಣುಗಳಿಗೆ ಕಾರಣವಾಗುವ ಬ್ಯಾಕ್ಟೀರಿಯಾ ಮತ್ತು ಶಿಲೀಂಧ್ರಗಳನ್ನು ಬೇವಿನ ಕಾಯಿ ಕೊಲ್ಲುತ್ತವೆ. ಇದರಲ್ಲಿರುವ ಉತ್ಕರ್ಷಣ ನಿರೋಧಕಗಳು ಬಾಯಿ ಹುಣ್ಣು ಮತ್ತು ಉರಿಯೂತವನ್ನು ಕಡಿಮೆ ಮಾಡುತ್ತದೆ. ಇದಲ್ಲದೆ, ಬಾಯಿಯ ಉರಿಯೂತದ ಗುಣಲಕ್ಷಣಗಳು ಬಾಯಿಯ ಹುಣ್ಣುಗಳ ನೋವು ಮತ್ತು ಊತವನ್ನು ಕಡಿಮೆ ಮಾಡುತ್ತದೆ.

ಸೋಂಕನ್ನು ನಿವಾರಿಸುತ್ತದೆ ಇದು ಬ್ಯಾಕ್ಟೀರಿಯಾ, ವೈರಸ್‌ಗಳು, ಶಿಲೀಂಧ್ರಗಳಂತಹ ಸಾಂಕ್ರಾಮಿಕ ಏಜೆಂಟ್‌ಗಳನ್ನು ಕೊಲ್ಲುತ್ತದೆ. ಇದರಲ್ಲಿರುವ ಫೈಟೊಕೆಮಿಕಲ್ಸ್ ದೇಹದ ಪ್ರತಿರಕ್ಷಣಾ ವ್ಯವಸ್ಥೆಯನ್ನು ಬಲಪಡಿಸುತ್ತದೆ. ಅವು ರೋಗಗಳ ವಿರುದ್ಧ ಹೋರಾಡುವ ಸಾಮರ್ಥ್ಯವನ್ನು ಹೆಚ್ಚಿಸುತ್ತವೆ. ಇದಲ್ಲದೆ.. ಇದು ರಕ್ತದಲ್ಲಿನ ಬಿಳಿ ರಕ್ತ ಕಣಗಳು ಮತ್ತು ಪ್ರತಿಕಾಯಗಳ ಸಂಖ್ಯೆಯನ್ನು ಹೆಚ್ಚಿಸುತ್ತದೆ.

ಚರ್ಮಕ್ಕೆ ಪ್ರಯೋಜನಕಾರಿ ಬೇವು ನಿಮ್ಮ ಚರ್ಮಕ್ಕೆ ತುಂಬಾ ಪೌಷ್ಟಿಕವಾಗಿದೆ. ಇದು ಉತ್ಕರ್ಷಣ ನಿರೋಧಕಗಳಲ್ಲಿ ಸಮೃದ್ಧವಾಗಿದೆ. ಇವು ಚರ್ಮದ ವಯಸ್ಸಾದ ಪ್ರಕ್ರಿಯೆಯನ್ನು ನಿಧಾನಗೊಳಿಸಲು ಸಹಾಯ ಮಾಡುತ್ತದೆ. ಅದೂ ಅಲ್ಲದೆ.. ಬೇವಿನಲ್ಲಿ ವಿಟಮಿನ್ ಸಿ ಮತ್ತು ವಿಟಮಿನ್ ಇ ಕೂಡ ಇದೆ. ಇವು ಚರ್ಮವನ್ನು ಮೃದುವಾಗಿ ಮತ್ತು ಹೊಳೆಯುವಂತೆ ಮಾಡಲು ಸಹಾಯ ಮಾಡುತ್ತದೆ.

# ಮುಖ್ಯೋಪಾಧ್ಯಾಯ ಮತ್ತು ವೃತ್ತಿಗೌರವ

ಸರ್ಕಾರಿ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರು ಎಂದರೆ ಸಾಕು, ಆರಾಮಾಗಿ ಐದಂಕಿಯ ಸಂಬಳ ಪಡೆ-ಯುತ್ತಾರೆ, ಯಾವ ಜವಾಬ್ದಾರಿಯೂ ಇಲ್ಲದೆ ಪಟ್ಟಣಕ್ಕೆ ಸುತ್ತಾಡಿಕೊಂಡು ಇರುತ್ತಾರೆ ಎಂದು ಬಹುತೇಕ ಊರುಗಳ ಜನ ಅವರ ಬಗೆಗೆ ಹಗುರವಾಗಿ ಮಾತನಾಡುತ್ತಾರೆ.

ಸೇವಾ ಬಡ್ತಿ ಎನ್ನುವಾಗ, ಯಾವ ಶಿಕ್ಷಕರೂ ಈ ಹುದ್ದೆ ಮತ್ತು ಜವಾಬ್ದಾರಿಯನ್ನು ಬೇಡ ಎಂದು ನಿರಾಕರಿಸುವಂತಿಲ್ಲ. ವೇತನದ ವಿಷಯಕ್ಕೆ ಬಂದರೆ, ಉಳಿದವರಿಗಿಂತ ಸ್ವಲ್ಪ ಹೆಚ್ಚು ಹಣ ಬರುತ್ತದೆ. ಆದರೆ ಹೆಚ್ಚಿನ ಮುಖ್ಯೋಪಾಧ್ಯಾಯರು ತಮಗೆ ಈ ಕೆಲಸದಲ್ಲಿ ಸುಖಕ್ಕಿಂತ ಕಷ್ಟವೇ ಹೆಚ್ಚು ಎನ್ನುತ್ತಾರೆ.

ಶಾಲೆಗಳಲ್ಲಿ ಪೋಷಕರ ಸಭೆ ನಡೆದಾಗಲೆಲ್ಲ ಮುಖ್ಯೋಪಾಧ್ಯಾಯರನ್ನು ಹೆತ್ತವರು ತರಾಟೆಗೆ ತೆಗೆದು ಕೊಳ್ಳುತ್ತಾರೆ. ಅವರಿಂದ ಯಾವುದೇ ಪ್ರಯೋಜನ ಇಲ್ಲ, ಯಾವಾಗಲೂ ಸುತ್ತಾಡುತ್ತಾ ಇರುತ್ತಾ-ರೆ, ಪಾಠ ಮಾಡುವುದೇ ಇಲ್ಲ ಎಂದೆಲ್ಲ ಹಳಿಯುತ್ತಾರೆ.ಖಾಸಗಿ ಶಾಲೆಯಲ್ಲಾದರೆ ಒಬ್ಬ ಅಟೆಂಡರ್ ಇರುತ್ತಾನೆ. ಶಾಲೆಗೆ ಅಗತ್ಯವಿರುವ ಪರಿಕರಗಳನ್ನು ತಂದುಕೊಡುತ್ತಾನೆ. ಸರ್ಕಾರಿ ಶಾಲೆಗಳಲ್ಲಿ ಮುಖ್ಯೋಪಾಧ್ಯಾಯರೇ ಅಟೆ-ಂಡರ್! ಓದುವ ಪುಸ್ತಕಗಳನ್ನು ತರಲು ಶಿಕ್ಷಣಾಧಿಕಾರಿ ಕಚೇರಿಗೆ ಹೋಗಬೇಕಾಗುತ್ತದೆ, ಬಿಸಿಯೂಟದ ತರಕಾರಿ ತರಬೇಕಾಗುತ್ತದೆ, ಕುಸಿಯುವ ಹಂತದಲ್ಲಿರುವ ಶಾಲೆಯ ಕಟ್ಟಡವನ್ನು ದುರಸ್ತಿ ಮಾಡಿಸಿಕೊಡಿ ಎಂದು ಬೇಡಲು ಶಾಸಕರು, ಅಧಿಕಾರಿಗಳ ಬಳಿಗೆ ಕಾಲಿಗೆ ಚಕ್ರ ಕಟ್ಟಿಕೊಂಡು ಅವರು ಸುತ್ತುತ್ತಲೇ ಇರಬೇಕಾಗುತ್ತದೆ.

ಇನ್ನು ಬಿಸಿಯೂಟದ ಆಹಾರ ಪದಾರ್ಥಗಳ ಲೆಕ್ಕಾಚಾರ ಇಡುವುದಂತೂ ಮುಖ್ಯೋಪಾಧ್ಯಾಯರ ಸಹನೆಯ ಶಕ್ತಿಗೆ ಒಂದು ಸವಾಲು. ಅಕ್ಕಿ, ಉಪ್ಪು, ಎಣ್ಣೆ ಎಲ್ಲವೂ ಪ್ರತಿ ವಿದ್ಯಾರ್ಥಿಗೂ ಗ್ರಾಂ ಲೆಕ್ಕದಲ್ಲಿ ಬರುತ್ತದೆ. ಪ್ರತಿದಿನದ ಹಾಜರಾತಿಗೆ ಅನುಗುಣವಾಗಿ ಅದೇ ಲೆಕ್ಕಾಚಾರದಲ್ಲಿ ಎಲ್ಲವನ್ನೂ ಅವರೇ ಅಡುಗೆಯವರಿಗೆ ತೂಕ ಮಾಡಿಕೊಡಬೇಕು.

ತಿಂಗಳ ಕೊನೆಗೆ ಖರ್ಚಾಗಿ ಉಳಿದ ಆಹಾರ ಪದಾರ್ಥಗಳು ಬಂದ ದಾಸ್ತಾನಿಗೆ ಹೊಂದಿಕೆಯಾಗಬೇಕು. ತರಕಾರಿ ಖರೀದಿಗೂ ತಲಾವಾರು ಪೈಸೆಗಳ ಲೆಕ್ಕದಲ್ಲಿ ಬರುವ ಹಣ ಕೆಲವೊಮ್ಮೆ ಒಂದು ದಿನದ ತರಕಾರಿ ಖರೀದಿಗೂ ಸಾಲದೇ ಹೋಗುತ್ತದೆ. ಆಗ, ಇದೇ ಮುಖ್ಯೋಪಾಧ್ಯಾಯರು ತಮ್ಮ ಕಿಸೆಯಿಂದ ಭರ್ತಿ ಮಾಡಬೇಕಾದ ಸಂದರ್ಭವೂ ಇರುತ್ತದೆ.

ಬಿಸಿಯೂಟ ಸಿದ್ಧವಾಗುವಾಗ ರುಚಿ ನೋಡಿ ಪರೀಕ್ಷಿಸಲು ಮುಖ್ಯೋಪಾಧ್ಯಾಯರು



ತಯಾರಾಗಿ ಇರಬೇಕು. ಆಹಾರದಲ್ಲಿ ಹಲ್ಲಿ ಬಿದ್ದರೆ, ಪಾತ್ರೆಯ ಕಿಲುಬು ಸೇರಿದರೆ ಅದರ ದುಷ್ಪರಿಣಾಮಗಳನ್ನು ಅವರೇ ಎದುರಿಸಬೇಕು. ಇನ್ನು, ಮೂವತ್ತು ಮಕ್ಕಳಿಗೆ ಒಬ್ಬರಂತೆ ಶಿಕ್ಷಕರನ್ನು ಸರ್ಕಾರ ನೇಮಿಸುತ್ತದೆ. ಏಳು ತರಗತಿಗಳು ಸೇರಿ ಮೂವತ್ತೇ ಮಕ್ಕಳಿರುವ ಶಾಲೆಗಳೂ ಇವೆ.

ಒಂದು ತರಗತಿಗೆ ಒಬ್ಬರಂತೆ ಶಿಕ್ಷಕರಿಲ್ಲದಿದ್ದರೂ ಇರುವ ಶಿಕ್ಷಕರ ಜೊತೆಗೇ ಎಲ್ಲ ಪಾಠಗಳನ್ನೂ ಹಂಚಿಕೊಂಡು ಕಲಿಸಲು ಮುಖ್ಯೋಪಾಧ್ಯಾಯರು ಮುಂದಾಗಬೇಕಾಗುತ್ತದೆ. ಇಂತಹ ಸಮಯದಲ್ಲಿ ಮಕ್ಕಳು ಅನುತ್ತೀರ್ಣರಾದರೆ, ಸರ್ಕಾರಿ ಶಾಲೆಯಲ್ಲಿ ಸರಿಯಾಗಿ ಪಾಠ ಮಾಡುವುದಿಲ್ಲ ಎಂದು ಊರವರು ದೂರುತ್ತಾರೆ. ಒಂದು ಸರ್ಕಾರಿ ಶಾಲೆಯಲ್ಲಿ ಇತ್ತೀಚಿನ ಮಳೆಗೆ ಶೌಚಾಲಯ ಕುಸಿಯಿತು. ಈ ದುರ್ಘಟನೆ ರಾತ್ರಿ ಸಂಭವಿಸಿದ ಕಾರಣ ಜೀವಹಾನಿಯಾಗಲಿಲ್ಲ.

ಪೋಷಕರು ಮುಖ್ಯೋಪಾಧ್ಯಾಯರ ಮೇಲೆ ಮುಗಿಬಿದ್ದರು. ಹಗಲೇನಾದರೂ ಇದು ನಡೆದಿದ್ದರೆ ಮಕ್ಕಳ ಪ್ರಾಣ ಹೋಗುತ್ತಿತ್ತು, ಇದು ಶಿಕ್ಷಕರ ಬೇಜವಾಬ್ದಾರಿಯಿಂದ ಸಂಭವಿಸಿದೆ ಎಂದು ಆರೋಪಿಸಿದರು. ಆಗ ಮುಖ್ಯೋಪಾಧ್ಯಾಯರು, ಶೌಚಾಲಯ ದುರಸ್ತಿಗೆ ಸಂಬಂಧಿಸಿದಂತೆ ಒಂದು ವರ್ಷದಿಂದಲೂ ಪೋಷಕರ ಸಭೆಯಲ್ಲಿ ಸಲ್ಲಿಸುತ್ತಾ ಬಂದ ಪ್ರಸ್ತಾವದ ನಿರ್ಣಯವನ್ನು ಮುಂದಿಟ್ಟರು.

ಶಾಸಕರು ಹಾಗೂ ವಿವಿಧ ಅಧಿಕಾರಿಗಳಿಗೆ ಸಲ್ಲಿಸಿದ ಮನವಿಗಳ ಸ್ವೀಕೃತಿ ಪತ್ರಗಳನ್ನೂ ತೋರಿಸಿದರು. ಅಲ್ಲಿ ಅಧಿಕಾರಿಗಳ ನಿರ್ಲಕ್ಷ್ಯ ಎದ್ದು ಕಾಣುತ್ತಿತ್ತು. ಈಗಲೂ ಅನೇಕ ಸರ್ಕಾರಿ ಶಾಲೆಗಳಲ್ಲಿ ಪೀಠೋಪಕರಣಗಳಿಲ್ಲ, ಆಟದ ಸಾಮಗ್ರಿಗಳಿಲ್ಲ. ಗ್ರಾಮ ಪಂಚಾಯಿತಿ ಸದಸ್ಯರಿಗೂ ಅಧಿಕಾರ ಚಲಾಯಿಸಲು ಇಂತಹ ಶಾಲೆಗಳ ಶಿಕ್ಷಕರೇ ಬಲಿಪಶುಗಳಾಗಿರುತ್ತಾರೆ.

ಅವರ ವೃತ್ತಿಯನ್ನು ಗೌರವಿಸದೆ, ಸಾಮಾಜಿಕವಾಗಿ ಗುರು ಎಂಬ ಸ್ಥಾನಕ್ಕೆ ಇರುವ ಮಹತ್ವದ ಅರಿವೂ ಇಲ್ಲದೆ ಜನರ ಮುಂದೆ ಶಿಕ್ಷಕರನ್ನು ಮೂದಲಿಸುವುದು, ಅವಹೇಳನ ಮಾಡುವುದು ಜನಪ್ರತಿನಿಧಿಗಳ ಜಾಯಮಾನವಾಗಿ ಬಿಡುತ್ತಿದೆ.

ಸರ್ಕಾರಿ ಶಾಲೆಯ ಅಧ್ಯಾಪಕನಾಗಿ ಶ್ರಮಿಸುವ ವ್ಯಕ್ತಿಯೊಬ್ಬನ ವೃತ್ತಿಗೌರವದ ರಕ್ಷಣೆಗೆ ಮುಂದಾಗಬೇಕಿರುವುದು ಸರ್ಕಾರದ ಗುರುತರ ಜವಾಬ್ದಾರಿ ತಾನೆ? ಕುಸಿದು ಬೀಳುತ್ತಿರುವ ಶಾಲಾ ಕಟ್ಟಡಗಳ ತುರ್ತು ದುರಸ್ತಿಗೆ ಸಕಾಲದಲ್ಲಿ ಹಣ ಒದಗಿಸಬೇಕು.

ಕೆಲ ಶಾಲೆಗಳಲ್ಲಿ ಬಿಸಿಯೂಟದ ಅಡುಗೆ ಮನೆಯ ಚಾವಣಿ ಮಳೆ ಬಂದರೆ ಸೋರುತ್ತದೆ. ಆ ನೀರನ್ನು ಹಿಡಿದಿಟ್ಟುಕೊಳ್ಳಲು ಸಾಲುಸಾಲಾಗಿ ಬಕೆಟ್‌ಗಳನ್ನು ಇರಿಸಬೇಕಾದ ದುರವಸ್ಥೆ ಅಲ್ಲಿರುತ್ತದೆ. ಇಂತಹ ಸ್ಥಿತಿಯನ್ನು ತಪ್ಪಿಸಬೇಕು.

ಪುಸ್ತಕ, ತರಕಾರಿ ತರುವ ಕೆಲಸಕ್ಕೆ ಸರ್ಕಾರವು ಒಬ್ಬ ಜವಾನನನ್ನು ನೇಮಿಸಿದರೆ, ಶಿಕ್ಷಕರು ಪೇಟೆ ಸುತ್ತುವ ಸಂಕಷ್ಟ ತಪ್ಪುತ್ತದೆ. ಶಿಕ್ಷಣದ ಅಭಿವೃದ್ಧಿಗಾಗಿ ತಾವು ಮಾಡಿದ ಕೆಲಸಗಳನ್ನು ಜಾಹೀರಾತುಗಳಲ್ಲಿ ಮಾತ್ರ ಹೇಳಿಕೊಳ್ಳುವ ಸರ್ಕಾರಗಳು, ಶಾಲೆಗಳ ಕುಂದು ಕೊರತೆಗಳನ್ನು ಆಮೂಲಾಗ್ರವಾಗಿ ಸರಿಪಡಿಸಲು ಇದುವರೆಗೂ ಶಕ್ತವಾಗಿಲ್ಲ. ವ್ಯವಸ್ಥೆಯ ನಿರ್ಲಕ್ಷ್ಯವು ಮುಖ್ಯೋಪಾಧ್ಯಾಯರ ಬುಡವನ್ನೇ ಅಲುಗಾಡಿಸುವುದು ಮಾತ್ರ ವಿಷಾದನೀಯ.

## ಪ್ಯಾರಸಿಟಮಾಲ್ ಹೆಚ್ಚು ಸೇವನೆ ಮಾಡೋರು ನೀವಾಗಿದ್ರೆ ಎಚ್ಚರ

ಸ್ವಲ್ಪ ಮೈ ಬಿಸಿ ಆಗ್ಲಿ ಇಲ್ಲ ಶೀತದ ಅನುಭವವಾಗ್ಲಿ ನಾವು ಮೊದಲು ಮಾಡೋದು ಮಾತ್ರೆ ನುಂಗುವ ಕೆಲಸ. ಅನೇಕರು ಪ್ಯಾರಸಿಟಮಾಲ್ ಮಾತ್ರೆ ಸೇವನೆ ಮಾಡ್ತಾರೆ. ಒಂದು ಮಾತ್ರೆ ಒಳಗೆ ಹೋಗ್ತಿದ್ದಂತೆ ದೇಹ ಬೆಚ್ಚಗಾಗುವುದಲ್ಲದೆ ಜ್ವರದ ಲಕ್ಷಣ ಕಡಿಮೆ ಆಗುತ್ತದೆ. ತಕ್ಷಣ ಜ್ವರ ಕಡಿಮೆಯಾಗುತ್ತೆ ಎನ್ನುವ ಕಾರಣಕ್ಕೆ ಅನೇಕರು ಪ್ಯಾರಸಿಟಮಾಲ್ ಮಾತ್ರೆ ಮೊರೆ ಹೋಗ್ತಾರೆ. ಪದೇ ಪದೇ, ವೈದ್ಯರ ಸಲಹೆ ಇಲ್ಲದೆ ಪ್ಯಾರಸಿಟಮಾಲ್ ಮಾತ್ರೆ ತೆಗೆದುಕೊಳ್ಳುವುದು ಒಳ್ಳೆಯದಲ್ಲ.

ಆಗಾಗ ಅಥವಾ ಮೂರ್ನಾಲ್ಕು ದಿನ ಎರಡೂ ಹೊತ್ತು ನೀವು ಪ್ಯಾರಸಿಟಮಾಲ್ ಮಾತ್ರೆ ತೆಗೆದುಕೊಳ್ಳುವುದ್ರಿಂದ ನಿಮ್ಮ ಆರೋಗ್ಯದ ಮೇಲೆ ಅಡ್ಡಪರಿಣಾಮವಾಗುತ್ತದೆ. ಪ್ಯಾರಸಿಟಮಾಲ್ ಹಾನಿಕಾರಕವಲ್ಲ ನಿಜ. ಕೆಲವೊಮ್ಮೆ ಇದು ಮೂತ್ರಪಿಂಡ ಮತ್ತು ಯಕೃತ್ತಿಗೆ ಸಂಬಂಧಿಸಿದ ಅಪಾಯಗಳನ್ನು ಹೆಚ್ಚಿಸುತ್ತದೆ.

2021 ರಲ್ಲಿ ಇಂಗ್ಲೆಂಡ್ ಮತ್ತು ವೇಲ್ಸ್‌ನಲ್ಲಿ ಪ್ಯಾರಸಿಟಮಾಲ್ ಮಿತಿಮೀರಿದ ಸೇವನೆಯಿಂದ 227 ಜನರು ಸಾವನ್ನಪ್ಪಿದ್ದಾರೆ. ಜನರು ಅತಿ ಹೆಚ್ಚು ಸೇವನೆ ಮಾಡುವ ಮಾತ್ರೆಯಲ್ಲಿ



ಪ್ಯಾರಸಿಟಮಾಲ್ ಮುಂದಿದೆ.

ಸಾಮಾನ್ಯ ಮಟ್ಟದ ಜ್ವರ ಅಥವಾ ತಲೆನೋವು ಇದ್ದರೆ 24 ಗಂಟೆಗಳ ಒಳಗೆ 2000 ಮಿಗ್ರಾಂ ವರೆಗಿನ ಡೋಸ್ ತೆಗೆದುಕೊಳ್ಳಬಹುದು. ಅದಕ್ಕಿಂತ ಹೆಚ್ಚಿನ ಡೋಸ್ ತೆಗೆದುಕೊಂಡಾಗ ಹಾಗೂ ಮಾತ್ರೆ ಮಧ್ಯೆ ಸಮಯದ ಅಂತರವಿಲ್ಲದೆ ಹೋದಾಗ ಪ್ರಾಣಕ್ಕೆ ಅಪಾಯ. ಇದನ್ನು ದ್ರವರೂಪದಲ್ಲಿ ಸೇವನೆ ಮಾಡುವಾಗ ಜನರು ಪ್ರಮಾಣವನ್ನು ಸರಿಯಾಗಿ ಲೆಕ್ಕ ಮಾಡುವುದಿಲ್ಲ ಎನ್ನುತ್ತಾರೆ ತಜ್ಞರು.

ನೀವು ಹೆಚ್ಚಿನ ಪ್ರಮಾಣದಲ್ಲಿ ಪ್ಯಾರಸಿಟಮಾಲ್ ಸೇವನೆ ಮಾಡಿದ್ದೀರಿ ಎಂಬುದು ಗೊತ್ತಾಗುವುದು ಕಷ್ಟ. ಕೆಲವರಿಗೆ ವಾಂತಿ ಕಾಣಿಸಿಕೊಳ್ಳುತ್ತದೆ. ಯಕೃತ್ತಿನ ಬಳಿ ನೋವು ಕಾಣಿಸುತ್ತದೆ. ಮಾನಸಿಕ ಗೊಂದಲ. ಮೂತ್ರ ವಿಸರ್ಜನೆಯ ಕೊರತೆ, ವೇಗದ ಉಸಿರಾಟದ ಲಕ್ಷಣ ಕಾಣಿಸಿಕೊಳ್ಳುವುದಿದೆ.

## ಬೆಂಗಾಲಿ ಅಡುಗೆಯ ವಿಶೇಷ ಒಗ್ಗರಣೆ-ಪಾಂಚ್ ಪೋರನ್

ಒಗ್ಗರಣೆ ಹಾಕದೆ ಎಷ್ಟೋ ಅಡುಗೆಗಳು ಕೊನೆಗೊಳ್ಳುವುದಿಲ್ಲ. ಒಗ್ಗರಣೆ, ಅಡುಗೆಯ ಅಲಂಕಾರ ಹೆಚ್ಚಿಸುವುದೇ ಅಲ್ಲದೆ ರುಚಿ ಕೂಡ ಕೊಡುತ್ತದೆ. ದಕ್ಷಿಣ ಭಾರತದಲ್ಲಿ ಹೆಚ್ಚಾಗಿ ಒಗ್ಗರಣೆಗೆ ಸಾಸಿವೆ ಬಳಸುವುದುಂಟು. ಇನ್ನೂ ಕೆಲವರು ಜೀರಿಗೆ ಒಗ್ಗರಣೆ ಹಾಕುವ ಅಭ್ಯಾಸವನ್ನು ಇಟ್ಟುಕೊಂಡಿರುತ್ತಾರೆ.

ಆದರೆ ಇಲ್ಲೊಂದು ಕಡೆ ಒಗ್ಗರಣೆಗೆ ಬರೋಬ್ಬರಿ 5 ಪದಾರ್ಥಗಳನ್ನು ಮಿಶ್ರಣ ಮಾಡುತ್ತಾರೆ. ಹೌದು, ಪಾಂಚ್ ಪೋರನ್ ಎಂದು ಕರೆಯುವ ಬಂಗಾಳಿ ಒಗ್ಗರಣೆ ಡಬ್ಬಿಯ



ವಿಷಯ ಇದು. ಪಶ್ಚಿಮ ಬಂಗಾಳದಲ್ಲಿ ಒಗ್ಗರಣೆ ಅಂದರೆ ಕೇವಲ ಸಾಸಿವೆ ಅಥವಾ ಜೀರಿಗೆ ಇಂದ ಆಗುವುದಲ್ಲ. ಪಾಂಚ್ ಎಂದರೆ ಐದು. ಪೋರನ್ ಎಂದರೆ ಮಸಾಲೆಗಳು, 5 ಬಗೆಯ ಮಸಾಲೆಗಳ ಮಿಶ್ರಣವೇ ಪಾಂಚ್ ಪೋರನ್.

ಸಾಸಿವೆ, ಜೀರಿಗೆ, ಮೆಂತ್ಯೆ, ಸೋಂಪು, ಕಪ್ಪು ಜೀರಿಗೆ ಇವಿಷ್ಟರ ಮಿಶ್ರಣವೇ ಪಾಂಚ್ ಪೋರನ್. ಈ ಐದು ಮಸಾಲೆಗಳು ತನ್ನದೇ ಆದ ವಿಶೇಷ ಗುಣಗಳನ್ನು ಹೊಂದಿರುವುದರಿಂದ ಬಂಗಾಳಿ ಅಡುಗೆಗಳಲ್ಲಿ ಕಡ್ಡಾಯವಾಗಿ ಪಾಂಚ್ ಪೋರನ್ ಬಳಸಿಯೇ ಒಗ್ಗರಣೆ ಹಾಕುತ್ತಾರೆ. ನೀವೂ ಸಹ ನಿಮ್ಮ ಒಗ್ಗರಣೆ ಡಬ್ಬಿಯಲ್ಲಿ ಒಂದರ ಬದಲಿಗೆ ಐದು ಮಸಾಲೆಗಳ ಮಿಶ್ರಣದಿಂದ ಒಗ್ಗರಣೆ ಕೊಟ್ಟು ನೋಡಿ.

## ಅಸ್ತಮಾ ಉಲ್ಬಣಿಸಲು ಕಾರಣವಾಗುತ್ತಾ ಈ ಸೇವನೆ...?

ಅಸ್ತಮಾ ಹೆಚ್ಚಾಗಿ ದೊಡ್ಡವರು ಹಾಗೂ ಚಿಕ್ಕಮಕ್ಕಳಲ್ಲಿಯೂ ಕಂಡುಬರುವ ಒಂದು ಉಸಿರಾಟದ ಸಮಸ್ಯೆ. ಇದಕ್ಕೆ ಸರಿಯಾದ ಚಿಕಿತ್ಸೆ ನೀಡದಿದ್ದರೆ ಜೀವಕ್ಕೆ ಅಪಾಯ.

ಹಾಗಾಗಿ ಅಸ್ತಮಾದಿಂದ ಬಳಲುತ್ತಿರುವವರು ತಮ್ಮ ಆಹಾರದ ಬಗ್ಗೆಯೂ ಹೆಚ್ಚು ಗಮನ ಕೊಡಬೇಕು. ಅಸ್ತಮಾ ಸಮಸ್ಯೆಯಿರುವವರು ಮಾಂಸವನ್ನು ಸೇವಿಸಿದರೆ ಅವರ ಸಮಸ್ಯೆ ಮತ್ತಷ್ಟು ಹೆಚ್ಚಾಗುತ್ತದೆ.

ಸಂಶೋಧನೆಯೊಂದರ ಪ್ರಕಾರ ಬೇಯಿಸಿದ ಮಾಂಸದಲ್ಲಿ ಉತ್ಪತ್ತಿಯಾಗುವ ಉರಿಯೂತದ ಅಂಶ ಅಸ್ತಮಾಕ್ಕೆ ಕಾರಣವಾಗಬಹುದು. ಹಾಗಾಗಿ ಅಸ್ತಮಾ ಉಲ್ಬಣಿಸಲು ಆಹಾರ ಪದ್ಧತಿ ಮಹತ್ವದ ಪಾತ್ರ ವಹಿಸುತ್ತದೆ ಎಂದು ಸಂಶೋಧಕರು ಕಂಡುಕೊಂಡಿದ್ದಾರೆ.

ಅಧ್ಯಯನದಲ್ಲಿ ಅತಿಯಾದ ಮಾಂಸ ಸೇವನೆಯು ಉಬ್ಬಸದಂತಹ ಉಸಿರಾಟದ ಲಕ್ಷಣಗಳಿಗೆ ಕಾರಣವಾಗಿದೆ ಎಂದು ತೋರಿಸಿದೆ.

ಸಮುದ್ರಹಾರವಲ್ಲದ ಮಾಂಸವನ್ನು ಸೇವಿಸುವುದರಿಂದ ಈ ಸಮಸ್ಯೆ ಕಂಡು ಬರುತ್ತದೆ ಎನ್ನಲಾಗಿದೆ. ಇದು ಹೆಚ್ಚಾಗಿ ಮಕ್ಕಳ ಮೇಲೆ ಪರಿಣಾಮ ಬೀರುತ್ತದೆ ಎನ್ನಲಾಗಿದೆ. ಹಾಗಾಗಿ ಮಾಂಸವನ್ನು ಮಿತ ಪ್ರಮಾಣದಲ್ಲಿ ಸೇವಿಸಿ.


## ಬೆಳಗ್ಗೆ ಎದ್ದ ಕೂಡಲೇ ಈ ತಪ್ಪುಗಳನ್ನು ಮಾಡದಿರಿ..

ಇಂದಿನ ಬಿಡುವಿಲ್ಲದ ಜೀವನದಲ್ಲಿ ಹಾಸಿಗೆಯಿಂದ ಎದ್ದೇಳುವುದೇ ತಡ, ಓಡಲು ಶುರು ಮಾಡಿದರೆ, ಮತ್ತೆ ಮಲಗುವವವರೆಗೆ ವಿಶ್ರಾಂತಿಯೇ ಇಲ್ಲ. ಮಾನಸಿಕವಾಗಿ, ದೈಹಿಕವಾಗಿ ಬದುಕು ಶಾಂತವಾಗಿರುವುದಿಲ್ಲ.

ನಮ್ಮ ದಿನವನ್ನು ಕಿರಿಕಿರಿಯಿಂದ ಪ್ರಾರಂಭಿಸಿದರೆ, ಇಡೀ ದಿನ ನೀರಸವಾಗಿರುತ್ತದೆ. ಆದ್ದ-ರಿಂದ ಪ್ರತಿದಿನವೂ ನೆಮ್ಮದಿಯ ದಿನವಾಗಿರಬೇಕೆಂದರೆ ಎದ್ದ ತಕ್ಷಣ ಕೆಲವನ್ನು ರೂಢಿಸಿಕೊಳ್ಳಬೇಕು, ಕೆಲವೊಂದನ್ನು ತ್ಯಜಿಸಬೇಕು.

ಮೊಬೈಲ್ ಫೋನ್ ಬಳಸಬೇಡಿ ಬೆಳಗ್ಗೆ ಕಣ್ಣು ತೆರೆಯುತ್ತಿದ್ದಂತೆ ಫೋನ್ ನೋಡುವ ಅಭ್ಯಾಸ ಅನೇಕರಿಗೆ ಇರುತ್ತದೆ. ಕುಡಿಯುವ ನೀರು, ಪುಸ್ತಕಗಳ ಬದಲು ಮೊಬೈಲ್ ಫೋನ್ ತಲೆ ದಿಂಬಿನ ಕೆಳಗಿರುತ್ತದೆ. ಇದು ಸಮಯ ವ್ಯರ್ಥದ ಜೊತೆಗೆ ಆಯಾಸ, ತಲೆಯಲ್ಲಿ ಭಾರವನ್ನು ಉಂಟುಮಾಡುತ್ತದೆ.

ನಕಾರಾತ್ಮಕ ಆಲೋಚನೆಗಳಿಂದ ದೂರವಿರಿ ಬೇಗನೆ ಎದ್ದ ಕೂಡಲೇ ಶಾಂತಚಿತ್ತರಾಗಿ ದೇವರನ್ನು ಸ್ಮರಿಸುತ್ತಾ ದಿನ ಪ್ರಾರಂಭಿಸಿ, ಬೇಡವಾದುದೆಲ್ಲವನ್ನು ತಲೆಯಲ್ಲಿ ತುಂಬಿಕೊಂಡರೆ, ಆ ದಿನವೆಲ್ಲಾ



ನೆಮ್ಮದಿನ ಬದುಕು ನಿಮ್ಮದಾಗುವುದಿಲ್ಲ.

ವ್ಯಾಯಾಮ ಮಾಡಿ ಹೆಚ್ಚಿನ ಜನರು ಬೆಳಿಗ್ಗೆ ಎದ್ದ ನಂತರ ವ್ಯಾಯಾಮವನ್ನು ತಪ್ಪಿಸುತ್ತಾರೆ. ಮೊಬೈಲ್, ಟಿವಿ ನೋಡುವ ಬದಲು ವ್ಯಾಯಾಮ, ಪೇಪರ್ ಓದುವಂತಹ ಅಭ್ಯಾಸ ರೂಢಿಸಿಕೊಂಡರೆ ಆರೋಗ್ಯಕ್ಕೂ ಒಳ್ಳೆಯದು.

ಖಾಲಿ ಹೊಟ್ಟೆಯಲ್ಲಿರಿ ಅನೇಕ ಜನರು ಬೆಳಿಗ್ಗೆ ಬೇಗನೆ ಎದ್ದ ಕೂಡಲೇ ಹಲ್ಲುಜ್ಜದೆಯೇ ಕಾಫಿ,ಟೀಗಳಿಗೆ ದಾಸರಾಗುತ್ತಾರೆ. ಎದ್ದ ಕೂಡಲೇ ಸ್ವಲ್ಪ ಹೊತ್ತು ಖಾಲಿ ಹೊಟ್ಟೆಯಲ್ಲಿರಿ, ಹಲ್ಲುಜ್ಜಿ, ಬಿಸಿನೀರು ಕುಡಿದು, ವ್ಯಾಯಾಮದ ನಂತರ ತಿಂಡಿ ಸೇವಿಸಿದರೆ ಆರೋಗ್ಯಕ್ಕೂ ಒಳ್ಳೆಯದು, ಗ್ಯಾಸ್ಟ್ರಿಕ್ ಸಮಸ್ಯೆಯಿಂದ ದೂರವಿರಬಹುದು.

ಯೋಜನೆಯೊಂದಿಗೆ ಕೆಲಸ ಮಾಡಿ ಯಾವುದೇ ಯೋಜನೆ ಇಲ್ಲದೆ ದಿನವನ್ನು ಪ್ರಾರಂಭಿಸುವ ಅನೇಕ ಜನರಿದ್ದಾರೆ. ಅಂತಹ ಜನರು ಯಾವಾಗಲೂ ಒತ್ತಡ, ಆತಂಕ ಮತ್ತು ಪ್ರಕ್ಷುಬ್ಧತೆಯನ್ನು ಹೊಂದಿರುತ್ತಾರೆ.


ಅವರು ಮಾನಸಿಕ ಮತ್ತು ದೈಹಿಕ ಸಮಸ್ಯೆಗಳನ್ನು ಎದುರಿಸಬಹುದು. ಅಧಿಕ ರಕ್ತದೊತ್ತಡದಂತಹ ರೋಗಗಳೂ ಬರಬಹುದು. ಹಾಗಾಗಿಯೇ ಬೆಳಗ್ಗೆ ನೀವು ಮಾಡಬಹುದಾದ ಕೆಲಸಗಳನ್ನು ಮೊದಲೇ ಪ್ಲಾನ್ ಮಾಡಿ.

## ಮಕ್ಕಳ ಹಸಿವು ಹೆಚ್ಚಬೇಕೆಂದ್ರೆ ಹೀಗೆ ಮಾಡಿ

ಆಹಾರ ಎಂದಾಕ್ಷಣ ಮಕ್ಕಳು ದೂರ ಓಡ್ತಾರೆ. ಆಹಾರ, ಊಟದ ವಿಷಯ ಬಂದಾಗ ಒಂದಲ್ಲ ಒಂದು ನೆಪ ಹೇಳಿ ಪಾಲಕರಿಂದ ತಪ್ಪಿಸಿಕೊಂಡು ಓಡ್ತಾರೆ. ಬದಲಾಗುತ್ತಿರುವ ಹವಾಮಾನ ಹಾಗೂ ಆಹಾರ ಪದ್ಧತಿಯೂ ಮಕ್ಕಳ ಹಸಿವನ್ನು ಕಡಿಮೆ ಮಾಡ್ತಾ ಇದೆ.

ಮಕ್ಕಳು ಕಡಿಮೆ ಆಹಾರ ಸೇವನೆ ಮಾಡಿದಲ್ಲಿ ಅದು ಅವರ ಬೆಳವಣಿಗೆಗೆ ಅಡ್ಡಿಯುಂಟು ಮಾಡುತ್ತದೆ. ದೇಹ ಶಕ್ತಿ ಕಳೆದುಕೊಂಡು ದುರ್ಬಲವಾಗುತ್ತದೆ. ಮಕ್ಕಳ ಈ ಸಮಸ್ಯೆಗೆ ಮನೆಯಲ್ಲಿಯೇ ಮದ್ದಿದೆ. ಕೆಲವೊಂದು ಆಹಾರಗಳನ್ನು ಮಕ್ಕಳಿಗೆ ನೀಡುವುದರಿಂದ ಮಕ್ಕಳ ಹಸಿವು ಜಾಸ್ತಿಯಾಗುತ್ತದೆ.

ಸೇಬು: ಮಕ್ಕಳಿಗೆ ಹಸಿವಾಗ್ತಿಲ್ಲ ಎಂದಾದ್ರೆ ಸೇಬು ಹಣ್ಣನ್ನು ತಿನ್ನಲು ಕೊಡಿ. ಇದ್ರಿಂದ ಮಕ್ಕಳ ರಕ್ತ ಶುದ್ಧವಾಗುವುದಲ್ಲದೆ ಹಸಿವಾಗುತ್ತದೆ. ಸೇಬು ಹಣ್ಣಿನ ಜೊತೆ ಕಪ್ಪು ಉಪ್ಪನ್ನು ಅವಶ್ಯವಾಗಿ ನೀಡಿ.



ಮಕ್ಕಳು ಸೇಬು ಹಣ್ಣನ್ನು ತಿನ್ನುವುದಿಲ್ಲವೆಂದಾದ್ರೆ ಜ್ಯೂಸ್ ಮಾಡಿ ಕುಡಿಸಿ.

ಪುದೀನಾ: ಪುದೀನಾ ದೇಹವನ್ನು ತಂಪು ಮಾಡುತ್ತದೆ. ಸ್ವಲ್ಪ ಪುದೀನಾ ರಸಕ್ಕೆ ಜೇನು ತುಪ್ಪವನ್ನು ಬೆರೆಸಿ ಬೆಳಿಗ್ಗೆ ಹಾಗೂ ರಾತ್ರಿ ಈ ಮಿಶ್ರಣವನ್ನು 1 ಚಮಚ ಬಿಸಿನೀರಿನೊಂದಿಗೆ ನೀಡಿ. ಇದ್ರಿಂದ ಹೊಟ್ಟೆ ಸ್ವಚ್ಛವಾಗಿ ಹಸಿವು ಹೆಚ್ಚಾಗುತ್ತದೆ. ಹಸಿರು ತರಕಾರಿ: ಹಸಿರು ಎಲೆ ಹಾಗೂ ತರಕಾರಿಗಳಿಂದ ಮಾಡಿದ ಸೂಪ್ ಮಕ್ಕಳಿಗೆ ನೀಡಿ. ಇದು ಮಲಬದ್ಧತೆಯನ್ನ ಕಡಿಮೆ ಮಾಡುತ್ತದೆ. ಹಾಗೆ ಹೊಟ್ಟೆಯಲ್ಲಿರುವ ಗ್ಯಾಸ್ ಹೋಗಲಾಡಿಸಿ ಹಸಿವು ಹೆಚ್ಚಿಸುತ್ತದೆ.

## ಮಕ್ಕಳ ಕಣ್ಣಿನ ಆರೋಗ್ಯದ ಬಗ್ಗೆ ಇರಲಿ ಗಮನ

ಮಕ್ಕಳು ಮೊಬೈಲ್ ಇಲ್ಲವೆ ಟಿವಿ ನೋಡುವುದು ವಿಪರೀತ ಹೆಚ್ಚಿದೆ. ಇದ-ರಿಂದ ಮಕ್ಕಳ ಕಣ್ಣಿನ ಮೇಲೆ ಹಲವು ದುಷ್ಪರಿಣಾಮಗಳಾಗುತ್ತವೆ. ಆಹಾರ ಪದ್ಧತಿಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳುವುದರಿಂದ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬಹುದು.

ಒಮೆಗಾ-3 ಕೊಬ್ಬಿನ ಆಮ್ಲ ಇರುವ ಆಹಾರಗಳನ್ನು ಮಕ್ಕಳಿಗೆ ಕೊಡಿ. ಮಕ್ಕಳು ಹಠ ಮಾಡುತ್ತಾರೆ ಎಂಬ ಕಾರಣಕ್ಕೆ ಹೆಚ್ಚು ಕರಿದ ತಿಂಡಿಗಳನ್ನು ತಯಾರಿಸಿ ಕೊಡದಿರಿ. ಮಕ್ಕಳಿಗೆ ಹಸಿರು ತರಕಾರಿಗಳನ್ನು ತಿನ್ನಲು ನೀಡಿ. ಹಲವು ಬಗೆಯ ಸಲಾಡ್ ಗಳನ್ನು ತಯಾರಿಸಿ ಕೊಡಿ.

ಮೊಟ್ಟೆಯಲ್ಲಿರುವ ವಿಟಮಿನ್ ಕಣ್ಣಿನ ಹಲವು ಸಮಸ್ಯೆಗಳನ್ನು ದೂರ ಮಾಡುತ್ತದೆ. ಕಿತ್ತಳೆ ಹಣ್ಣನ್ನು ಮಕ್ಕಳಿಗೆ ತಿನ್ನಿಸಿ.

## ಮಳೆಗಾಲದಲ್ಲಿ ಸೊಪ್ಪಿನ ಆಹಾರ ಅಪಾಯಕಾರಿ, ತಿನ್ನುವುದಾದರೆ ಈ ಮುನ್ನೆಚ್ಚರಿಕೆವಹಿಸಿ

ಸೊಪ್ಪು ಆರೋಗ್ಯಕ್ಕೆ ತುಂಬಾ ಒಳ್ಳೆಯದು, ಆದರೆ ಮಳೆಗಾಲದಲ್ಲಿ ಸೊಪ್ಪು ತಿನ್ನವುದು ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಲ್ಲ, ಅದರಲ್ಲೂ ಸೊಪ್ಪಿನಲ್ಲೂ ಕೆಲವೊಂದು ಸೊಪ್ಪುಗಳನ್ನು ಅಂದರೆ ಕೆಸ ಈ ಬಗೆ-ಯ ಸೊಪ್ಪು ಬಳಸಬಹುದು, ಪಾಲಾಕ್, ಅರಿವೆ ಸೊಪ್ಪು, ದಂಟಿನ ಸೊಪ್ಪು ಹಾಗೂ ಕೆಲವು ಹಸಿರು ತರಕಾರಿಗಳು ಮಳೆಗಾಲಕ್ಕೆ ಸೂಕ್ತ ಆಹಾರ ಅಲ್ವೇ ಅಲ್ಲ. ಪೋಷಕಾಂಶ, ವಿಟಮಿನ್ಸ್ ಎಲ್ಲಾ ಇರುವ ಈ ಆಹಾರಗಳು ಮಳೆಗಾಲಕ್ಕೆ ಸೂಕ್ತ ಆಹಾರವಲ್ಲ ಏಕೆ ಎಂದು ನೋಡೋಣ ಬನ್ನಿ: ಇವುಗಳನ್ನು ಸೋಂಕು ಹೆಚ್ಚಿರುತ್ತದೆ ಮಳೆಗಾಲದಲ್ಲಿ ನೀವು ಸೊಪ್ಪಿನಲ್ಲಿ ಚಿಕ್ಕ-ಚಿಕ್ಕ ಹುಳಗಳು ಕೂಡು ಕಟ್ಟಿರುವುದನ್ನು ಗಮನಿಸಿರಬಹುದು, ಇನ್ನು ಎಲೆಗಳು ಹುಳ ತಿಂದಿರುತ್ತದೆ ಅಲ್ಲದೆ ಕೆಲವೊಂದು ಎಲೆಗಳ ಮೇಲೆ ಬಿಳಿ-ಬಿಳಿ ಕಂಡು ಬರುವುದು, ಈ ರೀತಿ ಕಂಡು ಬರುವುದು ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಲ್ಲ.

ಈ ಸೊಪ್ಪಿನ ಆಹಾರ ನಮ್ಮ ಹೊಟ್ಟೆಯನ್ನು ಸೇರಿದರೆ ವಾಂತಿ, ಬೇಧಿ, ಹೊಟ್ಟೆ ನೋವು ಸಂಭವಿಸಬಹುದು. ಆದ್ದ-ರಿಂದ ಮಳೆಗಾಲದಲ್ಲಿ ಸೊಪ್ಪಿನ ಆಹಾರ ಪದಾರ್ಥಗಳನ್ನು ದೂರವಿಡುವುದು ಒಳ್ಳೆಯದು. ಒಂದು ವೇಳೆ ಸೊಪ್ಪು ತಿನ್ನುವುದಾದರೆ ಈ ಬಗ್ಗೆ ಜಾಗ್ರತೆವಹಿಸಿ ನೀವು ಸೊಪ್ಪು ತಿನ್ನಲೇಬೇಡಿ ಎಂದು ಹೇಳುತ್ತಿಲ್ಲ, ಆದರೆ ಈ ಬಗ್ಗೆ ಜಾಗ್ರತೆವಹಿಸಿ. ನೀವು ಹುಳ ತಿಂದಿರುವ ಅಥವಾ ಎಲೆಗಳಲ್ಲಿ ಹುಳ ಇರುವ, ಬಿಳಿ- ಬಿಳಿ ಇರುವ ಆಹಾರವನ್ನು ಅಡುಗೆಗೆ ಬಳಸಬೇಡಿ.

**ಇನ್ನು ನೀವು ಸೊಪ್ಪು ಬಳಸುವಾಗ ಈ ಬಗೆಯ ಮುನ್ನೆಚ್ಚರಿಕೆವಹಿಸಿ:**

* ನೀವು ಮಳೆಗಾಲದಲ್ಲಿ ಯಾರ



ಬಳಿಯಿಂದ ಖರೀದಿ ಮಾಡುತ್ತೀರಿ ಎನ್ನುವುದು ಮುಖ್ಯ (ಹುಳ ತಿನ್ನಬಾರದು ಎಂದು ಕೆಲವರು ತುಂಬಾ ಕೀಟನಾಶಕ ಸಿಂಪಡಿಸುತ್ತಾರೆ, ಈ ಕುರಿತು ಕೂಡ ಜಾಗ್ರತೆವಹಿಸಬೇಕು, ಸಾವಯವ ಪದ್ಧತಿಯಲ್ಲಿ ಬೆಳೆದ ಸೊಪ್ಪು ಬಳಸಿ)

* ಸೊಪ್ಪನ್ನು ತಂದು ಹರಿಯುವ ನೀರಿನಲ್ಲಿ ತೊಳೆಯಿರಿ

* ಸೊಪ್ಪಿನಲ್ಲಿ ಹುಳವಿದೆಯೇ ಎಂದು ಒಂದೊಂದು ಸೊಪ್ಪನ್ನು ಬಿಡಿಸಿ ನೋಡಿ

* ನಂತರ ಸೊಪ್ಪನ್ನು ಚೆನ್ನಾಗಿ ಬೇಯಿಸಿ ತಿನ್ನಿ. ಮಳೆಗಾಲದ ಆಹಾರ ಮಿಸ್ ಮಾಡ್ಬೇಡಿ ಕೆಲವೊಂದು ಆಹಾರಗಳು ಮಳೆಗಾಲದಲ್ಲಿಯೇ ಸಿಗುವುದು. ಉದಾಹರಣೆಗೆ ತಜಂಕ್, ಕೆಸುವಿನ ಎಲೆ ಈ ಬಗೆಯ ಸೊಪ್ಪನ್ನು ಮಳೆಗಾಲದಲ್ಲಿ ತಿನ್ನುವುದು ತುಂಬಾ ಒಳ್ಳೆಯದು. ಇಂಥ ಆಹಾರಗಳನ್ನು ತಿನ್ನಲು ಮಿಸ್ ಮಾಡಿದಿರಿ ಆದರೆ ಜಾಗ್ರತೆವಹಿಸಿ ಅಷ್ಟೇ. ಮಳೆಗಾಲದಲ್ಲಿ ಯಾವ ಬಗೆಯ ಆಹಾರ ಒಳ್ಳೆಯದು

* ಮಳೆಗಾಲದಲ್ಲಿ ನೀವು ಸೋರೆಕಾಯಿ, ಸಿಹಿ ಕುಂಬಳಾಯಿ, ಸಿಹಿ ಗೆಣಸು, ಹಾಗಾಲಕಾಯಿ ಈ ಬಗೆಯ ಆಹಾರಗಳನ್ನು ಸೇವಿಸುವುದು ಒಳ್ಳೆಯದು.

* ಮಳೆಗಾಲದಲ್ಲಿ ಎಣ್ಣೆ ಪದಾರ್ಥಗಳನ್ನು ಹೆಚ್ಚಾಗಿ ಸೇವಿಸಬೇಡಿ, ಸೂಪ್, ಲಘು ಆಹಾರ ಸೇವಿಸಿ.

# ರಾಜ್ಯಮಟ್ಟದ ಯುವ ಸಂಸತ್ ಸ್ಪರ್ಧೆ; ವಿಜೇತರಿಗೆ ಬಹುಮಾನ ವಿತರಿಸಿದ ಸಚಿವ ಎಚ್. ಕೆ. ಪಾಟೀಲ

## ಯುವ ಸಂಸತನಲ್ಲಿ ಪಾಲ್ಗೊಂಡವರಲ್ಲಿ ನಾಯಕತ್ವ ಗುಣ ಖಂಡಿತ ಮೂಡುತ್ತದೆ

ಗದಗ: ಪರಿಣಾಮಕಾರಿ ವಿಷಯ ಮಂಡನಾ ಸಾಮರ್ಥ್ಯ ಇರುವವರನ್ನು ಸಮಾಜವು ನಾಯಕ ಎಂದು ಒಪ್ಪಿಕೊಳ್ಳುತ್ತದೆ ಎಂದು ರಾಜ್ಯದ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರು ಹೇಳಿದರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಸಹಯೋಗದೊಂದಿಗೆ ಜಿಲ್ಲಾಡಳಿತ ಭವನದಲ್ಲಿ ಶನಿವಾರ ಜರುಗಿದ ಪ್ರೌಢಶಾಲಾ ಮತ್ತು ಪದವಿ ಪೂರ್ವ ವಿದ್ಯಾರ್ಥಿಗಳ ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆಯ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಮಾರೋಪ ಉದ್ಘಾಟಿಸಿ ಅವರು ಮಾತನಾಡಿದರು.

ಯುವ ಸಂಸತನಲ್ಲಿ ಪಾಲ್ಗೊಂಡವರಲ್ಲಿ ನಾಯಕತ್ವ ಗುಣ ಖಂಡಿತ ಮೂಡುತ್ತದೆ. ಅದನ್ನು ಇಂದು ನಡೆದ ಸಂಸತ್ ಕಲಾಪದಲ್ಲಿ ಸಾಭಿತುಪಡಿಸಿದ್ದಿರಿ ಎಂದರು. ಯುವ ಸಂಸತ್ ಕಾರ್ಯಕ್ರಮ ದಲ್ಲಿ ಪಾಲ್ಗೊಂಡವರು ಮುಂದೆ ಖಂಡಿತವಾಗಿ ಶಾಸಕರು, ಸಂಸದರು, ಸ್ಥಳೀಯ ಸಂಸ್ಥೆಯ, ತಾ.ಪಂ, ಜಿಪಂ ಸದಸ್ಯರು ಅಧ್ಯಕ್ಷರಾಗುತ್ತಿರಿ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಯುವಕರು ದೇಶ ಕಟ್ಟುವ ಕಾಯಕದಲ್ಲಿ ಮಹತ್ವದ ಪಾತ್ರ ವಹಿಸಬೇಕು. ನಿಮ್ಮ ವಿಧ್ಯಾರ್ಥಿ ಜೀವನದಲ್ಲಿ ಉತ್ತಮ ಮೌಲ್ಯಗಳು, ಪ್ರಾಮಾಣಿಕತೆ ಮೈಗೂಡಿಸಿಕೊಂಡು ಸಾಮಾಜಿಕ ರಾಜಕೀಯ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ತಿಳಿಸಿದರು.

ಕೇವಲ ಮಾಧ್ಯಮ ಗಳನ್ನು ತಲೆಯಲ್ಲಿಟ್ಟುಕೊಂಡು ರಾಜಕೀಯ ಮಾಡದೇ, ಪ್ರಾಮಾಣಿಕ, ನೈತಿಕ ನೆಲೆಗಟ್ಟಿನಲ್ಲಿ ಸಾಮಾಜಿಕ ಸೇವೆ ಮಾಡುವ ಮನೋಭಾವನೆ ರೂಡಿಸಿಕೊಳ್ಳಬೇಕು. ನಮ್ಮ



ಯೋಜನಾ ಸಾಮರ್ಥ್ಯ ಮಹತ್ತರವಾಗಿ ಇಟ್ಟುಕೊಂಡು ಅದರ ಸಾಕಾರಕ್ಕೆ ನಿರಂತರ ಶ್ರಮ ವಹಿಸಿ, ಸಮಾಜಕ್ಕೆ ನಮ್ಮದೇ ಆದ ಸೇವೆಯನ್ನು ನೀಡಲು ಯುವಕರು ಮುಂದಾಗಬೇಕು. ಜನಹಿತಕ್ಕಾಗಿ ನಿಮ್ಮ ಅಮುಲ್ಯವಾದ ಸಮಯವನ್ನು ಮಿಸಲಿಡುವ ಶಪತವನ್ನು ಮಾಡುವ ಜೋತೆಗೆ, ಪ್ರಾಮಾಣಿಕ ಆಡಳಿತ ಸಮಾಜಕ್ಕೆ ನೀಡುವ ದೃಡ ನಿರ್ದಾರ ನಿಮ್ಮದಾಗಿಸಿಕೊಳ್ಳಲು ಕರೆ ನೀಡಿದರು.

ರಾಜಕಾರಣಿಗಳ ಕೈ ಹಿಡಿದು ಉತ್ತಮ ಮಾರ್ಗದೆಡೆಗೆ ಸಾಗಿಸುವ ಶಕ್ತಿ ಯುವಜನತೆಗಿದೆ. ಅದನ್ನು ತಾವು ನಿರಂತರವಾಗಿ ಮಾಡಬೇಕು ಎಂದು ಸಚಿವ ಎಚ್. ಕೆ. ಪಾಟೀಲ ತಿಳಿಸಿದರು.

ವಿಧಾನಪರಿಷತ್ ಸದಸ್ಯರಾದ ಎಸ್.ವಿ. ಸಂಕನೂರ ಮಾತನಾಡಿ, ಗದಗ ಜಿಲ್ಲೆ ವಿವಿಧ ಕ್ಷೇತ್ರದಲ್ಲಿ ತನ್ನದೇ ಆದ ಸಾಧನೆ ಮಾಡಿದೆ, ಇಂತಹ ಕ್ಷೇತ್ರದಲ್ಲಿ ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆ ನಡೆದದ್ದು, ಹಾಗೂ ಸಂಸದೀಯ ಸಚಿವರು ಗದಗ ಜಿಲ್ಲೆಯವರು ಎಂಬುದು ಹೆಮ್ಮೆ ತಂದಿದೆ. ಯುವ ಸಂಸತ್ ಸ್ಪರ್ಧೆ ಪಾಲ್ಗೊಂಡ ಯುವಕರ ರಾಜಕೀಯ ಸಾಮಾಜಿಕ ಜೀವನಕ್ಕೆ ಸ್ಪೂರ್ತಿ ನೀಡಲಿದೆ ಎಂದರು.

ಯುವಕರಲ್ಲಿ ಕೀಳರಿಮೆ ಬೇಡ. ನಿಮ್ಮಲ್ಲಿ ದೇವರು ಒಂದಿಲ್ಲೊಂದು ಶಕ್ತಿಯನ್ನು ನೀಡಿರುತ್ತಾರೆ. ಅದನ್ನು ಸರಿಯಾಗಿ ಪರಿಣಾಮಕಾರಿಯಾಗಿ ಸದ್ಬಳಕೆ ಮಾಡಿಕೊಂಡು ಯಶಸ್ಸು ನಿಮ್ಮದಾಗಿಸಿಕೊಳ್ಳಿ. ರಾಷ್ಟ್ರಕ್ಕೆ ನಿಮ್ಮದೇ ಆದ ಸೇವಿ ಮಾಡಬೇಕು ಎಂದರು.

ಹಾಲಕೆರೆ ಮಠದ ಮುತ್ತಿನ ಬಸವಲಿಂಗ ಶ್ರೀಗಳು ಸಾನಿಧ್ಯ ವಹಿಸಿ, ಆಶೀರ್ವಚನ ನೀಡಿದರು. ಕಾರ್ಯಕ್ರಮದಲ್ಲಿ ಸಚಿವರು, ಶಾಸಕರು, ಮುಖ್ಯ ಅತಿಥಿಗಳು ಯುವ ಸಂಸತ್ ಸ್ಪರ್ಧೆಯಲ್ಲಿ ವಿಜೇತರಾದ ವಿಧ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಿದರು.

ಕಾರ್ಯಕ್ರಮದಲ್ಲಿ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಜಿ. ಶ್ರೀಧರ್, ಜಿಲ್ಲಾಧಿಕಾರಿ ಶ್ರೀಮತಿ ವೈಶಾಲಿ ಎಂ.ಎಲ್,. ಶಾಲಾ ಶಿಕ್ಷಣ ಇಲಾಖೆಯ ಉಪನಿದೇಶಕ ಎಂ.ಎ. ರಡ್ಡೇರ (ಆಡಳಿತ) ಹಾಗೂ ಜಿ.ಎಲ್.ಬಾರಾಟಕ್ಕೆ (ಅಭಿವೃದ್ಧಿ), ಡಿಡಿಪಿಯು ಕೃಷ್ಣಪ್ಪ ಪಿ, ರವೀಂದ್ರನಾಥ ದೊಡ್ಡಮೇಟಿ, ಎನ್. ಆರ್. ಗೌಡರ, ವಿ.ಎಸ್. ದೊತ್ರದ್, ವೈ.ಸಿ.ಪಾಟೀಲ, ಕೊಟ್ರೇಶ್ ವಿಭೂತಿ, ನೊಡಲ್ ಅಧಿಕಾರಿ ಪ್ರಭಾಕರ ಇದ್ದರು.

# ಹಿಂದೂ ಮಹಾಸಾಗರದಲ್ಲಿ ಇಸ್ರೇಲಿ ಬಿಲಿಯನೇರ್ ಮಾಲೀಕತ್ವದ ಹಡಗಿನ ಮೇಲೆ ದಾಳಿ, ಇರಾನ್ ಮೇಲೆ ಆರೋಪ

ದುಬೈ: ಇಸ್ರೇಲಿ ಬಿಲಿಯನೇರ್ ಒಡೆತನದ ಕಂಟೈನರ್ ಹಡಗಿನ ಮೇಲೆ ದಾಳಿ ನಡೆಸಿದ ಪ್ರಕರಣ ಬೆಳಕಿಗೆ ಬಂದಿದೆ. ಹಿಂದೂ ಮಹಾಸಾಗರದಲ್ಲಿ ಶಂಕಿತ ಇರಾನ್‌ನ ಡ್ರೋನ್‌ನಿಂದ ಈ ದಾಳಿ ನಡೆದಿದೆ ಎಂದು ಅಮೆರಿಕಾದ ರಕ್ಷಣಾ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಗುಪ್ತಚರ ವಿಷಯಗಳ ಬಗ್ಗೆ ಚರ್ಚಿಸಲು ಅನಾಮಧೇಯತೆಯ ಷರತ್ತಿನ ಮೇಲೆ ಸುದ್ದಿ ಸಂಸ್ಥೆಯೊಂದಕ್ಕೆ ಮಾತನಾಡಿದ ರಕ್ಷಣಾ ಅಧಿಕಾರಿಯೊಬ್ಬರು, ಹಿಂದೂ ಮಹಾಸಾಗರದಲ್ಲಿ ಕಂಟೈನರ್ ಹಡಗಿನ ಮೇಲೆ ದಾಳಿ ನಡೆದಿದೆ. ಶಾಹೆದ್-136 ಗಂಗಿ ಡ್ರೋನ್‌ಗಳಿಂದ ದಾಳಿ ಮಾಡಲಾಗಿದ್ದು ಡ್ರೋನ್ ದಾಳಿಯಿಂದಾಗಿ ಹಡಗಿಗೆ ಹಾನಿಯಾಗಿದೆ. ಆದರೆ, ಯಾವುದೇ ಸಿಬ್ಬಂದಿಗೆ ಗಾಯಗಳಾಗಿಲ್ಲ ಎಂದರು.

ನಾವು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದೇವೆ ಎಂದು ಅಧಿಕಾರಿ ತಿಳಿಸಿದ್ದಾರೆ. ಆದಾಗ್ಯೂ, ದಾಳಿಯ ಹಿಂದೆ ಇರಾನ್ ಇದೆ ಎಂದು ಅಮೆರಿಕಾ ಮಿಲಿಟರಿ ಏಕೆ ನಂಬುತ್ತದೆ ಎಂಬುದನ್ನು ವಿವರಿಸಲು ಅವರು ನಿರಾಕರಿಸಿದರು.

ಫ್ರಾನ್ಸ್‌ನ ಮಾರ್ಸಿಲ್ಲೆ ಮೂಲದ ಶಿಪ್ಪಿಂಗ್ ಕಂಪನಿಯಾದ CMA CGM ಈ ವಿಷಯದ ಬಗ್ಗೆ ತಕ್ಷಣ ಪ್ರತಿಕ್ರಿಯಿಸಲಿಲ್ಲ. ಆದರೆ, ಹಡಗಿನ ಸಿಬ್ಬಂದಿ ಹಡಗು ಅಪಾಯದಲ್ಲಿದೆ ಎಂದು ಹೇಳುತ್ತಿದ್ದಾರೆ.

ಹಡಗಿನ ಸ್ವಯಂಚಾಲಿತ ಗುರುತಿನ ವ್ಯವಸ್ಥೆ ಟ್ರ್ಯಕರ್ ಮಂಗಳವಾರ (ನ. 21) ದುಬೈನ ಜೆಬೆಲ್ ಅಲಿ ಬಂದರಿನಿಂದ ಹೊರಡುವಾಗ ಆಫ್ ಆಗಿತ್ತು. ಸುರಕ್ಷತಾ ಕಾರಣಗಳಿಗಾಗಿ ಹಡಗುಗಳು ತಮ್ಮ ಂಖಖ ಅನ್ನು ಸಕ್ರಿಯವಾಗಿರಿಸಿಕೊಳ್ಳಬೇಕು. ಆದರೆ ಅವರು ಗುರಿಯಾಗಿರಬಹುದು ಎಂದು ಕಂಡುಬಂದರೆ ಸಿಬ್ಬಂದಿಗಳು ಅವುಗಳನ್ನು ಆಫ್ ಮಾಡುತ್ತಾರೆ. ಇರಾನ್ ಬೆಂಬಲಿತ ಹೌತಿ ಬಂಡುಕೋರರ ನೆಲೆಯಾದ ಯೆಮೆನ್ ಬಳಿಯ ಕೆಂಪು ಸಮುದ್ರದ ಮೂಲಕ ಹಾದುಹೋಗುವಾಗ ಅದು ಈ ಹಿಂದೆ ಅದೇ ರೀತಿ ಮಾಡಿತ್ತು.

SIMI ಸಿಂಗಾಪುರ ಮೂಲದ ಈಸ್ಟರ್ನ್ ಪೆಸಿಫಿಕ್ ಶಿಪ್ಪಿಂಗ್ ಒಡೆತನದಲ್ಲಿದೆ. ಇಸ್ರೇಲಿ ಬಿಲಿಯನೇರ್ ಇಡಾನ್ ಆಫರ್ ನಿಯಂತ್ರಣದ ಕಂಪನಿಯಾಗಿದೆ. ಇಸ್ರೇಲಿ ಮಿಲಿಟರಿ ಮತ್ತು ವಿಶ್ವಸಂಸ್ಥೆಗೆ ಇರಾನ್‌ನ ಮಿಷನ್ ಈ ವಿಷಯಕ್ಕೆ ಇನ್ನೂ ಪ್ರತಿಕ್ರಿಯಿಸಿಲ್ಲ.

# ಜೈನ ಧರ್ಮದ ವಿಚಾರಗಳು ಅತ್ಯುನ್ನತ: ಮಹಾವೀರ ನಿಲಜಗಿ

ಹುಕ್ಕೇರಿ: ಜೈನ ಧರ್ಮವು ಅತ್ಯಂತ ಉತ್ಕೃಷ್ಟ ಮತ್ತು ಅತ್ಯುನ್ನತ ವಿಚಾರಗಳನ್ನು ಹೊಂದಿದ್ದು ಇಂದಿನ ಕಾಲಮಾನಕ್ಕೆ ಪ್ರಸ್ತುತ ಎನಿಸಿವೆ ಎಂದು ಮಹಾವೀರ ಉದ್ಯೋಗ ಸಮೂಹ ಸಂಸ್ಥೆಯ ಅಧ್ಯಕ್ಷರೂ ಆದ ಪುರಸಭೆ ಹಿರಿಯ ಸದಸ್ಯ ಮಹಾವೀರ ನಿಲಜಗಿ ಅಭಿಪ್ರಾಯಪಟ್ಟರು.

ಪಟ್ಟಣದ ಪೇಟೆ ಬಸದಿಯಲ್ಲಿ ಏರ್ಪಡಿಸಿದ ಸಿದ್ಧಚಕ್ರ ವಿಧಾನ(ಪೂಜೆ) ದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಅಹಿಂಸಾ ತತ್ವ ಬೋಧಿಸುವ ಜೈನ ಪರಂಪರೆಗೆ ತನ್ನದೇಯಾದ ಹಿನ್ನಲೆ ಹೊಂದಿದೆ ಎಂದರು.

ಮಹಿಳಾ ಮಂಡಳದ ಪ್ರೀಯಾ ಖತಗಲಿ ಮಾತನಾಡಿ, ಧಾರ್ಮಿಕ ಕಾರ್ಯಕ್ರಮಗಳಿಗೆ ತನು-ಮನ-ಧನದಿಂದ ಸದಾ ಸೇವೆ ಮಾಡುತ್ತಿರುವ ನಿಲಜಗಿ ಕುಟುಂಬಕ್ಕೆ ಸಮಸ್ತ ಪೇಟೆ ಬಸದಿ ಶ್ರಾವಕ-ಶ್ರಾವಕಿಯರಿಂದ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದರು.

ಈ ಸಿದ್ದ ಚಕ್ರ ವಿಧಾನ ಪೂಜೆ, ಮಹಾಪ್ರಸಾದ ಮತ್ತಿತರ ಕಾರ್ಯಕ್ಕೆ 1 ಲಕ್ಷ 8 ಸಾವಿರ ದಾನವಾಗಿ ನೀಡಿರುವ ಮಹಾವೀರ ನಿಲಜಗಿ ಅವರನ್ನು ಇದೇ ವೇಳೆ ಸನ್ಮಾನಿಸಿ ಗೌರವಿಸಲಾಯಿತು.

ಇನ್ನು ನ್ಯಾಯವಾದಿ ಸಂಘದ ಅಧ್ಯಕ್ಷರೂ ಆದ ಮತ್ತೋರ್ವ ದಾನಿ ರಾಜು ಚೌಗಲಾ ಅವರನ್ನು ಸತ್ಕರಿಸಲಾಯಿತು. ಮುಖಂಡರಾದ ಅಣ್ಣಾಸಾಹೇಬ



ಖತಗಲಿ, ರವೀಂದ್ರ ಬಸ್ತವಾಡ, ನೇಮಿನಾಥ ಸೊಲ್ಲಾಪುರೆ, ಸಂಜು ಬಸ್ತವಾಡ, ಮಂಜುಳಾ ಅಡಿಕೆ, ಗೀತಾ ಬಸ್ತವಾಡ, ಕಲ್ಪನಾ ಖತಗಲಿ, ಗೀತಾ ಸೊಲ್ಲಾಪುರೆ ಮತ್ತಿತರರು ಉಪಸ್ಥಿತರಿದ್ದರು. ಅಥಿಶಯ ಬೈಯಾಜಿ ಅವರಿಂದ ಪೂಜಾ ವಿಧಿವಿಧಾನ ನೆರವೇರಿತು.

# ಸಕ್ರಿಯ ಕ್ಷಯರೋಗ ಪತ್ತೆ ಚಿಕಿತ್ಸಾ ಆಂದೋಲನ ಯಶಸ್ವಿಗೆ ಸಹಕರಿಸಿ: ಡಿಹೆಚ್‌ಒ ಡಾ.ವೈ ರಮೇಶ್‌ಬಾಬು

ಬಳ್ಳಾರಿ: ಮೈಕ್ರೋ ಬ್ಯಾಕ್ಟೀರಿಯಂ ಟ್ಯೂಬರ್‌ಕ್ಯುಲೋಸಿಸ್ ಎಂಬ ರೋಗಾಣುನಿಂದ ಹರಡುವ ಕ್ಷಯರೋಗವನ್ನು ನಿರ್ಮೂಲನೆ ಮಾಡಲು, ಸಕ್ರಿಯ ಕ್ಷಯರೋಗ ಪತ್ತೆ ಆಂದೋಲನದ ಸಂದರ್ಭದಲ್ಲಿ ಮನೆಗೆ ಭೇಟಿ ನೀಡುವ ಆರೋಗ್ಯ ಸಿಬ್ಬಂದಿಗೆ ದಯವಿಟ್ಟು ಮಾಹಿತಿ ನೀಡಿ ಕಫ ಪರೀಕ್ಷೆ ಮಾಡಿಸಿಕೊಳ್ಳಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ವೈ ರಮೇಶ್ ಬಾಬು ಅವರು ಹೇಳಿದರು.

ಯಾರಿಗಾದರೂ ಎರಡು ವಾರಗಳಿಗಿಂತ ಹೆಚ್ಚು ದಿನದ ಕೆಮ್ಮು, ಉಸಿರಾಟದಲ್ಲಿ ತೊಂದರೆ, ಸಂಜೆ ವೇಳೆ ಜ್ವರ, ರಾತ್ರಿ ವೇಳೆ ಮೈ ಬೆವರುವುದು, ಕಫದಲ್ಲಿ ರಕ್ತ ಬೀಳುವುದು, ಎದೆ ನೋವು, ಹಸಿವಾಗದಿರುವುದು, ತೂಕ ಇಳಿಕೆ, ರೋಗದ ಪ್ರಮುಖ ಲಕ್ಷಣಗಳಿದ್ದಲ್ಲಿ ತಕ್ಷಣ ಕಫ ಪರೀಕ್ಷೆ ಕೈಗೊಂಡು ಸೂಕ್ತ ಚಿಕಿತ್ಸೆ ಪಡೆಯಲು ಹತ್ತಿರದ ಆಸ್ಪತ್ರೆಗೆ ಭೇಟಿ ನೀಡಬೇಕು ಎಂದು ಅವರು ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಷ್ಟ್ರೀಯ ಕ್ಷಯರೋಗ ನಿರ್ಮೂಲನ ಕಾರ್ಯಕ್ರಮದಡಿ ಸಮೀಕ್ಷೆಯ ಸಂದರ್ಭದಲ್ಲಿ ಜೀವಿತ್ ಎಂಟರ್‌ಪ್ರೈಸಸ್ ವತಿಯಿಂದ ಬಹು ಔಷಧಿ ರೋಗ ನಿರೋಧಕ (ಎಂಡಿಆರ್ ಟಿಬಿ ರೋಗಿ) ಔಷಧಿಯ ಚಿಕಿತ್ಸೆ ಪಡೆಯುತ್ತಿರುವ 60 ಜನ ಕ್ಷಯರೋಗಿಗಳಿಗೆ ಚಿಕಿತ್ಸಾ ಅವಧಿ ಮುಗಿಯುವವರೆಗೆ ಪೌಷ್ಟಿಕಾಂಶವುಳ್ಳ ಕಿಟ್ ವಿತರಣೆ ಮಾಡಿ, ಅವರು ಮಾತನಾಡಿದರು.

ಪ್ರಸ್ತುತ ಸಕ್ರಿಯ ಕ್ಷಯರೋಗ ಪತ್ತೆ ಆಂದೋಲನದಡಿ 3,10,963 ಜನರನ್ನು ತಪಾಸಣೆಯ ಗುರಿ ಹೊಂದಲಾಗಿದ್ದು, ಇಲ್ಲಿಯವರೆಗೆ 2,44,103 ಜನರ ತಪಾಸಣೆ ಮಾಡಲಾಗಿದೆ, ಇವರಲ್ಲಿ ರೋಗಲಕ್ಷಣವುಳ್ಳ 1926 ಜನರ ಕಫ ಪರೀಕ್ಷೆ ಮಾಡಿದ್ದು, 24 ಜನರಿಗೆ ಕ್ಷಯರೋಗವಿರುವುದು ದೃಢಪಟ್ಟಿದ್ದು, ಇವರಿಗೆ ಚಿಕಿತ್ಸೆ ಆರಂಭಿಸಲಾಗಿದೆ ಎಂದು ತಿಳಿಸಿದರು.

ಕಫದಲ್ಲಿ ಪರೀಕ್ಷೆ ಮೂಲಕ ಕ್ಷಯರೋಗ ಪತ್ತೆಯಾದಾಗ



ಆರು ತಿಂಗಳ ಕಾಲ ಚಿಕಿತ್ಸೆ ನೀಡಲಾಗುವುದು.

ಒಂದು ವೇಳೆ ಕ್ಷಯರೋಗಿಯು ಚಿಕಿತ್ಸೆ ನಿರ್ಲಕ್ಷಿಸಿದರೆ, ಮಧ್ಯದಲ್ಲಿ ಚಿಕಿತ್ಸೆ ಬಿಟ್ಟಲ್ಲಿ ಬಹು ಔಷಧಿ ರೋಗ ನಿರೋಧಕ ಕ್ಷರ ರೋಗದಲ್ಲಿ 18 ತಿಂಗಳಿನಿಂದ 24 ತಿಂಗಳ ಕಾಲ ಚಿಕಿತ್ಸೆಯನ್ನು ಪಡೆಯಬೇಕಾಗುತ್ತದೆ ಎಂದು ಡಾ.ರಮೇಶ್ ಬಾಬು ಅವರು ವಿವರಿಸಿದರು.

ವಿಶೇಷವಾಗಿ ಕ್ಷಯರೋಗ ಚಿಕಿತ್ಸೆ ಪಡೆಯುತ್ತಿರುವರಿಗೆ ರೋಗನಿರೋಧಕ ಶಕ್ತಿ ಕುಂಠಿತಗೊಳ್ಳುವುದರಿಂದ ಕುಟುಂಬದ ಮುಖ್ಯ ವ್ಯಕ್ತಿಯು ದುಡಿಮೆ ಇಲ್ಲದೆ ಕುಟುಂಬ ಆರ್ಥಿಕ ತೊಂದರೆ ಈಡಾಗುವ ಪರಿಸ್ಥಿತಿ ಬರುತ್ತದೆ.

ಇಂಥ ಸಂದರ್ಭದಲ್ಲಿ ಪೂರಕ ಪೌಷ್ಟಿಕ ಆಹಾರದ ಅವಶ್ಯಕತೆ ಇದ್ದು, ದಾನಿಗಳಾಗಿ ಮುಂದೆ ಬಂದು ಕ್ಷಯರೋಗಿಗಳನ್ನು ನಿರ್ದಿಷ್ಟ ಅವಧಿಯೊಳಗೆ ರೋಗವನ್ನು ಗುಣಪಡಿಸುವ ಕಾರ್ಯದಲ್ಲಿ ಕೈಜೋಡಿಸಿ, ಜಿಲ್ಲೆಯನ್ನು ಕ್ಷಯಮುಕ್ತ ಬಳ್ಳಾರಿ ಜಿಲ್ಲೆಯನ್ನಾಗಿ ಮಾಡಲು ಭಾಗಿಯಾಗಬೇಕಿದೆ ಎಂದು ವಿನಂತಿಸಿದರು.

ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಇಂದ್ರಾಣಿ.ವಿ ಅವರು ಮಾತನಾಡಿ, ಪ್ರಸ್ತುತ ಜಿಲ್ಲೆಯಲ್ಲಿ 55 ದಾನಿಗಳಿಂದ 611 ಜನರಿಗೆ 1878 ಪೌಷ್ಠಿಕ ಆಹಾರ ಕಿಟ್‌ಗಳನ್ನು ಒದಗಿಸಲಾಗಿದೆ. ವಿಶೇಷವಾಗಿ ಸಂಡೂರು ತಾಲೂಕಿನಲ್ಲಿ ಗಣಿಬಾಧಿತ ಹಾಗೂ ಕಾರ್ಖಾನೆಗಳು ಹೊಂದಿರುವ ಪ್ರದೇಶವಾಗಿರುವುದರಿಂದ ಸಂಡೂರು ತಾಲ್ಲೂಕಿನ ಎಲ್ಲ 162 ರೋಗಿಗಳನ್ನು ಬಿಕೆಜಿ, ಶ್ರೀ ಕುಮಾರಸ್ವಾಮಿ ಮೈನಿಂಗ್ ಮತ್ತು ಮಿನರಲ್ ಕಂಪನಿ ದತ್ತು ತೆಗೆದುಕೊಂಡಿರುತ್ತಾರೆ ಎಂದು ತಿಳಿಸಿದ ಅವರು, ಜಿಲ್ಲೆಯ ಇತರೆ ತಾಲೂಕುಗಳಲ್ಲೂ ಸಹ ದತ್ತು ತೆಗೆದುಕೊಳ್ಳಲು ದಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಮುಂದೆ ಬರಬೇಕು ಎಂದು ವಿನಂತಿಸಿದರು.

ಈ ಸಂದರ್ಭದಲ್ಲಿ ಡಬ್ಲ್ಯೂಹೆಚ್‌ಓ ಪ್ರತಿನಿಧಿಗಳಾದ ಡಾ.ಹಂಸವೇಣಿ, ಡಾ.ಸಂಗೀತಾ, ಜಿಲ್ಲಾ ಕುಷ್ಟರೋಗ ನಿರ್ಮೂಲನಾಧಿಕಾರಿ ಡಾ.ವೀರೇಂದ್ರ ಕುಮಾರ್, ರಾರಾವಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ..ಬಸವರಾಜ್, ಜೀವಿತ್ ಎಂಟಪ್ರೈಸಸ್ ಅಧಿಕಾರಿಗಳಾದ ಹೊನ್ನೇಶ್ ಮತ್ತು ರಮೇಶ್, ಜಿಲ್ಲಾ ಪ್ರತಿನಿಧಿ ಚಂದ್ರಶೇಖರ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ.ಹೆಚ್ ದಾಸಪ್ಪನವರ ಹಾಗೂ ವಿಭಾಗದ ಡಿಪಿಎಸ್ ಗೂಡದಯ್ಯ, ಟಿಬಿಎಚ್‌ವಿ ಪುಷ್ಪಾವತಿ, ರಾಮಾಂಜಿನೇಯ ಸೇರಿದಂತೆ ಇತರರು ಹಾಜರಿದ್ದರು.

## ಕೃಷಿ ಸಚಿವರ ಪ್ರವಾಸ ಕಾರ್ಯಕ್ರಮ

ಬಳ್ಳಾರಿ: ಕೃಷಿ ಸಚಿವರು ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರಾದ ಎನ್.ಚಲುವರಾಯಸ್ವಾಮಿ ಅವರು, ನ.28 ಮತ್ತು 29ರಂದು ಬಳ್ಳಾರಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳುವರು.

ನ.28ರಂದು ಮಧ್ಯಾಹ್ನ 03.05 ಕ್ಕೆ ಬೆಂಗಳೂರಿನಿಂದ ವಾಯುಮಾರ್ಗದ ಮೂಲಕ 04.10ಕ್ಕೆ ತೋರಣಗಲ್ಲಿಗೆ ಆಗಮಿಸುವರು. ಅಲ್ಲಿಂದ 04.15ಕ್ಕೆ ಹೊರಟು, 04.40ಕ್ಕೆ ಸಂಡೂರು ತಾಲ್ಲೂಕಿನ ಕೋಡಾಲು ಮತ್ತು ರಾಜಾಪುರ ಗ್ರಾಮ ವ್ಯಾಪ್ತಿಯ ಹತ್ತಿ, ನವಣೆ ಮತ್ತು ಸಜ್ಜೆ ಬೆಳೆ ಹಾನಿ ಹಾಗೂ ಬರ ಪರಿಸ್ಥಿತಿ ವೀಕ್ಷಣೆ ನಡೆಸುವರು. ಸಂಜೆ 06ಕ್ಕೆ ತೋರಣಗಲ್ಲಿನ ಜಿಂದಾಲ್ ಅತಿಥಿ ಗೃಹದಲ್ಲಿ ವಾಸ್ತವ್ಯ ಮಾಡುವರು.

ನ.29ರಂದು ಬೆಳಿಗ್ಗೆ 09 ಗಂಟೆಗೆ ಹೊರಟು, 09.30ಕ್ಕೆ ಬಳ್ಳಾರಿ ತಾಲ್ಲೂಕು ವ್ಯಾಪ್ತಿಯ ಬೆಳಗಲ್ಲು ಮತ್ತು ಹಲಕುಂದಿ ಗ್ರಾಮ ವ್ಯಾಪ್ತಿಯ ತೊಗರಿ ಮತ್ತು ಸಜ್ಜೆ ಬೆಳೆ ಹಾನಿ ಹಾಗೂ ಬರ ಪರಿಸ್ಥಿತಿ ವೀಕ್ಷಣೆ ಮಾಡುವರು.

ನಂತರ ಬೆಳಿಗ್ಗೆ 10.30 ಕ್ಕೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬಳ್ಳಾರಿ ಜಿಲ್ಲೆಯ ಕೃಷಿ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸುವರು. ಬಳಿಕ 11.30ಕ್ಕೆ ಪತ್ರಿಕಾಗೋಷ್ಠಿ ನಡೆಸುವರು.

ಮಧ್ಯಾಹ್ನ 12 ಗಂಟೆಗೆ ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಭೇಟಿ ಹಾಗೂ ಕಾರ್ಯಕರ್ತರ ಅಹವಾಲು ಆಲಿಸುವರು. ನಂತರ ಮಧ್ಯಾಹ್ನ 12.30 ಕ್ಕೆ ಬಳ್ಳಾರಿಯಿಂದ ನಿರ್ಗಮಿಸುವರು ಎಂದು ಸಚಿವರ ಆಪ್ತ ಕಾರ್ಯದರ್ಶಿ ಅವರು ತಿಳಿಸಿದ್ದಾರೆ.

## ಗದಗ ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟ 2023

ಗದಗ: ಗದಗ ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟಗಳನ್ನು ನ. 26 ರಿಂದ 28 ರ ವರೆಗೆ ನಗರದ ಕೆ.ಎಚ್.ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ. ಪೊಲೋಸ್ ಕ್ರೀಡಾಕೂಟಗಳ ಉದ್ಘಾಟನಾ ಸಮಾರಂಭವು ನ.26 ರಂದು ಸಾಯಂಕಾಲ 4 ಗಂಟೆಗೆ ಜಿಲ್ಲಾ ಕ್ರೀಡಾಂಗದಲ್ಲಿ ಜರುಗಲಿದ್ದು ಜಿಲ್ಲಾ ಪ್ರಧಾನ ಸತ್ರ ನ್ಯಾಯಾದೀಶರಾದ ಬಸವರಾಜ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಾದ ದೀಪಿಕಾ ಬಾಜಪೇಯಿ ಅವರುಗಳು ಉದ್ಘಾಟಿಸುವರು.

ನವೆಂಬರ 28 ರಂದು ಪೊಲೋಸ್ ಕ್ರೀಡಾಕೂಟಗಳ ಸಮಾರೋಪ ಸಮಾರಂಭ ಜರುಗಲಿದ್ದು ಕಾರ್ಯಕ್ರಮದ ಮುಖ್ಯ ಅತಿಥಿ ಹಾಗೂ ಬಹುಮಾನ ವಿತರಕರಾಗಿ ಬೆಳಗಾವಿ ಉತ್ತರ ವಲಯದ ಆರಕ್ಷಕ ಮಹಾನೀರಿಕ್ಷಕರಾದ ವಿಕಾಶ್ ಕುಮಾರ ವಿಕಾಶ್ ಅವರು ಆಗಮಿಸುವರು. ವಿಶೇಷ ಆಹ್ವಾನಿತರುಗಳಾಗಿ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಾದೀಶರಾದ ರಾಜೇಶ್ವರ ಎಸ್. ಶೆಟ್ಟಿ ಅವರುಗಳು ಆಗಮಿಸುವರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ ಸರ್ವರನ್ನೂ ಸ್ವಾಗತ ಕೋರಿರುತ್ತಾರೆ.

## ನ.27ರಂದು ವಿದ್ಯುತ್ ವ್ಯತ್ಯಯ

ಬಳ್ಳಾರಿ: ನಗರ ಜೆಸ್ಕಾಂ ಉಪವಿಭಾಗ-1ರ ವ್ಯಾಪ್ತಿಗೆ ಬರುವ 110/11ಕೆ.ವಿ ಸೌತ್ ವಿದ್ಯುತ್ ವಿತರಣ ಕೇಂದ್ರ ದಿಂದ ವಿದ್ಯಾತ್ ಸರಬರಾಜು ಆಗುವ ಎಫ್-23, ಎಫ್-24, ಎಫ್-25, ಎಫ್-46, ಎಫ್-47 ಮತ್ತು ಎಫ್-48 ಫೀಡರ್‌ಗಳ ತುರ್ತು ನಿರ್ವಹಣಾ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ನ.27ರಂದು ಬೆಳಿಗ್ಗೆ 11ರಿಂದ ಸಂಜೆ 04ಗಂಟೆವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳಿವು:

ಬೆಂಗಳೂರು ರಸ್ತೆ, ಅಂದ್ರಾಳ್ ರಸ್ತೆ, ಕೊಲ್ಮಿ ಚೌಕ್, ಕಾರ್ಕಲ ತೋಟ, ಬಾಪೂಜಿ ನಗರ, ಮಿಲ್ಲರ್ ಪೇಟೆ, ಮೋತಿ ವೃತ್ತ, ತೇರು ಬೀದಿ, ಇಂಡಸ್ಟ್ರಿಯಲ್‌ಏರಿಯಾ ಹಂತ-1, ಮಹೇಶ್ ಪೈಪ್ಸ್, ಲಾರಿಟರ್ಮಿನಲ್, ಜೈನ್ ಮಾರ್ಕೆಟ್, ಸಾಯಿ ಕಾಲೋನಿ, ಎಪಿಎಮ್‌ಸಿ, ರಾಣಿತೋಟ, ಮರಿಸ್ವಾಮಿ ಮಠ, ದೊಡ್ಡ ಮಾರ್ಕೆಟ್, ತೋಪಿಗಲ್ಲಿ, ಬೊಮ್ಮನಾಳ್ ರೋಡ್ ಸೇರಿದಂತೆ ಇನ್ನೂ ಮುಂತಾದ ಏರಿಯಾಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ವಿದ್ಯುತ್ ಗ್ರಾಹಕರು ಹಾಗೂ ಸಾರ್ವಜನಿಕರು ಸಹಕರಿಸಬೇಕು ಎಂದು ಸಹಾಯಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಭಾರತ ಸಂವಿಧಾನ, ಪದ್ಧತಿಯು ಹೌದು, ಸಿದ್ಧಾಂತವೂ ಹೌದು, ಆಚರಣೆಯೂ ಹೌದು.

1947 ಅಗಷ್ಟ 15 ರಂದು ಭಾರತ ಸ್ವತಂತ್ರವಾದಾಗ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಯಿತು, ಪಾಕಿಸ್ತಾನದಿಂದ ಬಂದ ನಿರಾಶ್ರೀತರಿಗೆ ಪುನರ್ ವಸತಿ ಕಲ್ಪಿಸುವುದು ಒಂದುಕಡೆಯಾದರೆ, ಸಂಸ್ಥಾನಗಳ ವಿಲೀನೀಕರಣ ಮತ್ತೊಂದು ಕಡೆ, ಇವೆಲ್ಲವುದರ ಜೊತೆಗೆ ಕಾನುನನ್ನು ಸುವ್ಯಸ್ಥಿತಗೊಳಿಸುವುದು ದೊಡ್ಡ ಸವಾಲಿನ ಕೆಲಸವಾಗಿತ್ತು. ಸೂಮಾರು 200 ವರ್ಷಗಳ ಕಾಲ ನಮ್ಮನ್ನಾಳಿದ ಬ್ರಿಟಿಷರ ಪ್ರಭಾವ ಭಾರತೀಯರ ಜನಜೀವನದ ಎಲ್ಲಾ ಕ್ಷೇತ್ರಗಳಲ್ಲೂ ಪ್ರಭಾವ ಉಂಟುಮಾಡಿತ್ತು, ಇಂತಹ ಸಂದರ್ಭದಲ್ಲಿ ಇಡೀ ರಾಷ್ಟ್ರವನ್ನು ಒಂದೇ ಚೌಕಟ್ಟಿನ ಕಾನೂನಿನಲ್ಲಿ ನಿಯಂತ್ರಿಸುವ ಸಲುವಾಗಿ 9 ನೇ ಡಿಸೆಂಬರ 1946 ರಂದು ಸಂವಿಧಾನದ ರಚನಾ ಸಭೆ ನಡೆಯಿತು. ಡಾ॥ ಬಿ.ಆರ್.ಅಂಬೇಡ್ಕರರು ಈ ಸಂವಿಧಾನ ರಚನಾ ಸಭೆಯ ಅಧ್ಯಕ್ಷರಾಗಿದ್ದರು. ಸುಮಾರು 145 ದಿನಗಳ ಕಾಲ ಸಭೆ ಸೇರಿ 1949 ನವ್ಹಂಬರ 26 ರಂದು ಸಂವಿಧಾನವನ್ನು ಅಂಗಿಕರಿಸಿ, 26 ಜನೇವರಿ 1950 ರಂದು ಜಾರಿಗೆ ತರಲಾಯಿತು.

**ಸಂವಿಧಾನ ರಚನೆ ನಡೆದು ಬಂದ ದಾರಿ:**

1773 ರಲ್ಲಿ ಮಾಡಿದ ರೆಗ್ಯುಲೇಟಿಂಗ್ ಆಕ್ಟ್ ಕಾಯ್ದೆಯು ಭಾರತದ ರಾಜ್ಯಾಂಗದ ಅಭಿವೃದ್ಧಿಗೆ ಅಂದಿನ ಕಾಲದಲ್ಲಿ ಮಾಡಿದ ಮೊದಲ ಕಾಯ್ದೆಯಾಗಿತ್ತು.

1781 ರ ಸೆಟಲ್-ಮೆಂಟ್ ಆಕ್ಟ್ ಪ್ರಕಾರ ನ್ಯಾಯಾಧಿಕಾರದ ಕುರಿತಾದ ಕಾಯ್ದೆಯನ್ನು ಮಾಡಲಾಯಿತು.

1784 ರ ಪಿಡ್ಸ್ ಇಂಡಿಯಾ ಆಕ್ಟ್ ಪ್ರಕಾರ ಭಾರತದ ಆಡಳಿತದ ವ್ಯವಸ್ಥೆಯನ್ನು ನೇರವಾಗಿ ಬ್ರಿಟಿಷ ಆಳ್ವಿಕೆಯ ನಿಯಂತ್ರಣಕ್ಕೆ ಒಳಪಡಿಸಲಾಯಿತು.

1833 ರ ಚಾರ್ಟರ್ ಆಕ್ಟ್ ಪ್ರಕಾರ ನಾಗರಿಕ ಸೇವೆಗಳಿಗೆ ಮೆರಿಟ್ ಆಧಾರಿತ ವ್ಯವಸ್ಥೆಯನ್ನು ಪರಿಚಯಿಸಲಾಯಿತು.

1858 ರ ಭಾರತದ ಆಡಳಿತ ಕಾಯ್ದೆಯ ಪ್ರಕಾರ ಆಡಳಿತದ ವ್ಯವಸ್ಥೆಯನ್ನು ಈಸ್ಟ್ ಇಂಡಿಯಾ ಕಂಪನಿಯಿಂದ ನೇರವಾಗಿ ಬ್ರಿಟಿಷ್ ರಾಣಿಯು ಸರಕಾರದ ಮೂಲಕ ಅಧಿಕಾರ ನಡೆಸಲು ಪ್ರಾರಂಬಿಸಿದರು.

1861 ರ ಇಂಡಿಯನ್ ಕೌನ್ಸಿಲ್ ಕಾಯ್ದೆಯಲ್ಲಿ ಮೊದಲ ಬಾರಿಗೆ ಶಾಸನ ಸಭೆಯ ತರಹದ ಸಂಸ್ಥೆ ಸ್ಥಾಪಿಸಲಾಯಿತು, ಇದರಲ್ಲಿ ಬಾರತೀಯರಿಗೆ ಕೇಲವು ಮಟ್ಟಿನ ಪ್ರಾತಿನಿಧ್ಯ ಕೊಡಲಾಯಿತು.

1892 ರ ಇಂಡಿಯನ್ ಕೌನ್ಸಿಲ್ ಕಾಯ್ದೆಯಲ್ಲಿ ಮೊದಲ ಸಲ ಜನಗಣತಿ ಪ್ರಾರಂಭಿಸಲಾಯಿತು ಹಾಗೂ ಶಾಸನ ಸಭೆಗೆ ಬಜೆಟ್ ಮೇಲಿನ ಚರ್ಚೆ ಮತ್ತು ಪ್ರಶ್ನೆ ಕೇಳಲು ಅವಕಾಶ ಕಲ್ಪಿಸಲಾಯಿತು.


1909 ರ ಮಿಂಟೋ-ಮಾರ್ಲೆ ಕಾಯ್ದೆಯಲ್ಲಿ ಕೇಂದ್ರ ಮತ್ತು ಪ್ರಾಂತ್ಯಗಳೆರಡರಲ್ಲೂ ಶಾಸನಸಭೆಗಳಲ್ಲಿ ಸಮುದಾಯ ಮತ್ತು ವರ್ಗಗಳ ಆಧಾರದ ಮೇಲೆ ಮತದಾರರ ಮತ್ತು ಶಾಸನ ಸಭೆಗಳಲ್ಲಿ ಪ್ರಾತಿನಿದ್ಯ ನೀಡಲಾಯಿತು.

1919 ರ ಮಾಂಟೆಗೋ-ಚೆಲ್ಸ್ಮಫರ್ಡ ಕಾಯ್ದೆಯ ಪ್ರಕಾರ ದ್ವಿಮುಖ ಆಡಳಿತ ವ್ಯವಸ್ಥೆ ಜಾರಿಗೆ ತರಲಾಯಿತು, ಕೌನ್ಸಿಲ್ ನಲ್ಲಿಯ ಆರು ಜನ ಸದಸ್ಯರಲ್ಲಿ ಮೂವರು ಭಾರತೀಯರಿಗೆ ಅವಕಾಶ ಕಲ್ಪಿಸಲಾಯಿತು.

1935 ರ ಭಾರತ ಸರ್ಕಾರ ಕಾಯ್ದೆಯಲ್ಲಿ ಕೇಂದ್ರ ಮತ್ತು ರಾಜ್ಯಗಳ ಅಧಿಕಾರ ವುಭಜನೆಗೆ ಮೂರು ಪಟ್ಟಿಗಳನ್ನು (ಕೇಂದ್ರ ಪಟ್ಟಿ, ರಾಜ್ಯ ಪಟ್ಟಿ, ಸಮವರ್ತಿ ಪಟ್ಟಿ) ಸಿದ್ಧಪಡಿಸಲಾಯಿತು. ಅದರಂತೆ ಸಂಯುಕ್ತ ಆಡಳಿತ ಪದ್ದತಿ ಮತ್ತು ದ್ವಿಶಾಸನ ಆಡಳಿತ ವ್ಯವಸ್ಥೆಯನ್ನು ನೀಡಲಾಯಿತು.

1947 ರ ಸ್ವಾತಂತ್ರ್ಯ ಕಾಯ್ದೆಯ ಪ್ರಕಾರ ಭಾರತವನ್ನು ಸಾರ್ವಭೌಮ ರಾಷ್ಟ್ರವನ್ನಾಗಿ ಘೋಷಿಸಲಾಯಿತು ಮತ್ತು ಕೇಂದ್ರ ಹಾಗೂ ರಾಜ್ಯಗಳಲ್ಲಿ ಸರಕಾರಗಳನ್ನು ರಚಿಸಲು ಸಾದ್ಯವಾಯಿತು.ನಮ್ಮ ಸಂವಿಧಾನದ ಮೇಲೆ ವಿವಿಧ ದೇಶಗಳ ಪ್ರಭಾವ- ಡಾ॥ ಬಿ.ಆರ್.ಅಂಬೇಡ್ಕರರು ಸಂವಿಧಾನ ರಚಿಸುವಾಗ ಸುಮಾರು 145 ದಿನಗಳ ಕಾಲ ಸಭೆ ಸೇರಿ, ವಿವಿಧ ದೇಶಗಳ ಸಂವಿಧಾನಗಳ ಅದ್ಯಯನ ನಡೆಸಿ, ಉತ್ತಮ ಅಂಶಗಳನ್ನು ಪಟ್ಟಿ ಮಾಡಿ ಒಂದು ಬೃಹತ್ ಸಂವಿಧಾನ ರಚಿಸಿದ್ದಾರೆ. ಇದರಲ್ಲಿ ಒಕ್ಕೂಟ ವ್ಯವಸ್ಥೆ ಮತ್ತು ವಿಶಿಷ್ಟ ಅಧಿಕಾರಗಳು ಕೆನಡಾದಿಂದ ಪ್ರಭಾವಿತವಾದರೆ,

ಸಂವಿಧಾನ ತಿದ್ದುಪಡಿಯ ವಿಧಾನ ಮತ್ತು ರಾಜ್ಯಸಭೆಯ ಸದಸ್ಯರ ಚುನಾವಣೆ ವಿಧಾನಗಳು ದಕ್ಷಿಣ ಆಫ್ರಿಕಾದಿಂದ ಪ್ರಭಾವಿತವಾಗಿವೆ, ಮೂಲಭೂತ ಹಕ್ಕುಗಳು, ನ್ಯಾಯಾಂಗ ವ್ಯವಸ್ಥೆ, ಸ್ವತಂತ್ರತೆ ಹಾಗೂ ನ್ಯಾಯ ಸಮೀಕ್ಷಾ ಅಧಿಕಾರ ಅಮೇರಿಕಾದಿಂದ ಪ್ರಭಾವಿತವಾದರೆ, ಪಾರ್ಲಿಮೆಂಟ್ ಮಾದರಿ ಹಾಗೂ ಸ್ಪೀಕರ್ ಸ್ಥಾನ ಮತ್ತು ಕರ್ತವ್ಯಗಳು ಬ್ರೀಟಿಷರಿಂದ ಪ್ರಭಾವಿತವಾಗಿವೆ. ಮೂಲಭೂತ ಕರ್ತವ್ಯಗಳ




ಮೇಲೆ ಪೂರ್ವ ಸೋವಿಯತ್ ಯುನಿಯನ್ ಪ್ರಭಾವವಿದ್ದರೆ, ರಾಜ್ಯ ನಿರ್ದೇಶಾತ್ಮಕ ತತ್ವಗಳ ಮೇಲೆ ಐರಿಷ್ ದೇಶದ ಪ್ರಭಾವವಿದೆ. ಸಮವರ್ತಿ ಪಟ್ಟಿಗೆ ಆಸ್ಟ್ರೇಲಿಯಾದ ಪ್ರಭಾವವಿದ್ದರೆ, ಶಾಸನವನ್ನು ನಿರ್ಣಯ ಮಾಡುವ ವಿಧಾನವು ಜಪಾನ್ ದೇಶದಿಂದ ಪ್ರಭಾವಿತವಾಗಿದೆ.

**ಸಂವಿಧಾನ ದಿನ: ಒಂದು ಅವಲೋಕನ-** ಭಾರತ ಸಂವಿಧಾನ ಎಂಬುದು ಒಂದು ಸಾಂಸ್ಕೃತಿಕ ವ್ಯಕ್ತಿತ್ವ ಎಂದರೆ ತಪ್ಪಾಗಲಾರದು, ಕಾರಣ ಇಷ್ಟೇ ಭಾರತ ವಿವಿಧತೆಯಲ್ಲಿ ಏಕತೆಯನ್ನು ಸಾರಿದ ದೇಶವಾಗಿದೆ, ಇಲ್ಲಿ ಹಲವಾರು ರಾಜ್ಯಗಳು, ಅನೇಕ ರೀತಿಯ ಆಚರಣೆಗಳು ಇರುವುದರಿಂದ ಎಲ್ಲವನ್ನೂ ಸರಿದೂಗಿಸಿಕೊಂಡು ಹೋಗುವ ಎಲ್ಲಾ ಅಂಶಗಳು ನಮ್ಮ ಸಂವಿಧಾನದಲ್ಲಿದೆ, ಆದ್ದರಿಂದ ನಮ್ಮ ದೇಶದ ಸಂವಿಧಾನ ಎಂಬುದು ಒಂದು ಪದ್ದತಿಯು ಹೌದು, ಸಿದ್ಧಾಂತವೂ ಹೌದು ಜೊತೆಜೊತೆಗೆ ಆಚರಣೆಯೂ ಹೌದು.

ನಮ್ಮ ಈ ಸಂವಿಧಾನದಲ್ಲಿ ಬದುಕು ಕಟ್ಟಿಕೊಳ್ಳಲು ಅನುಕೂಲಿಸುವ ಎಲ್ಲಾ ನೀತಿ ನಿಯಮಗಳಿವೆ, ನಮ್ಮ ಹಕ್ಕುಗಳೇನು ಎಂದು ತಿಳಿಸಿ ಜೀವನ ವಿಧಾನವನ್ನು ಕಟ್ಟಿಕೊಳ್ಳಲು ರಕ್ಷಾ ಕವಚದಂತೆ ನಮ್ಮನ್ನು ಕಾಪಾಡಿಕೊಳ್ಳಲು ಸಹಾಯಕಾರಿಯಾಗಿದೆ, ಅಷ್ಟೇ ಅಲ್ಲದೇ ದೇಶಕ್ಕಾಗಿ ನಾವೇನು ಮಾಡಬೇಕು ಎಂದು ತಿಳಿಸುವ ಮೂಲಭೂತ ಕರ್ತವ್ಯಗಳಿವೆ, ದುಷ್ಟರಿಗೆ ಶಿಕ್ಷಿಸುವ ಶಿಷ್ಟರನ್ನು ರಕ್ಷಿಸುವ ರಕ್ಷಣೆಯ ಸೂತ್ರಗಳಿವೆ, ಸ್ವತಂತ್ರ್ಯ, ಸಮಾನತೆಯ ಲಕ್ಷಣಗಳಿವೆ, ಅನೇಕ ರೀತಿಯ ಮಾನವಿಯ ಮೌಲ್ಯಗಳಿವೆ ಅದಕ್ಕಾಗಿ ಹೇಳುವುದು "ಭಾರತ ದೇಶದ ಸಂವಿದಾನ ನಮ್ಮ ಹೆಮ್ಮೆ" ಎಂದು.

ಭಾರತದ ಸಂವಿದಾನ ಇಡೀ ಪ್ರಪಂಚದಲ್ಲಿಯೇ ಅತ್ಯಂತ ದೊಡ್ಡ ಹಾಗೂ ಲಿಖಿತ ಸಂವಿಧಾನವಾಗಿದೆ, ಇದು ಪ್ರಾರಂಭದಲ್ಲಿ 22 ಭಾಗಗಳು, 8 ಅನುಸೂಚಿಗಳು, 395 ವಿಧಿಗಳನ್ನು ಹೊಂದಿತ್ತು, ನಂತರದ ಹಲವಾರು ತಿದ್ದುಪಡಿಗಳಿಂದಾಗಿ ಈಗ 25 ಭಾಗಗಳು, 12 ಅನುಸೂಚಿಗಳು, 450 ವಿಧಿಗಳನ್ನು ಒಳಗೊಂಡ ಬೃಹತ್ ಸಂವಿಧಾನವಾಗಿದೆ, ಇದರಲ್ಲಿ ಸಂಸದೀಯ ಸರಕಾರ ಪದ್ದತಿ, ಗಣತಂತ್ರ ವ್ಯವಸ್ಥೆ, ಸಂಯುಕ್ತ ಪದ್ಧತಿ, ಮೂಲಭೂತ ಹಕ್ಕುಗಳು, ಮೂಲಭೂತ ಕರ್ತವ್ಯಗಳು, ರಾಜ್ಯ ನಿರ್ದೇಶಕ ತತ್ವಗಳು ಸ್ವತಂತ್ರ ಮತ್ತು ಏಕಿಕೃತ ನ್ಯಾಯಾಂಗ ವ್ಯವಸ್ಥೆ, ಏಕ ಪೌರತ್ವ, ವಯಸ್ಕ ಮತದಾನ ಪದ್ದತಿ, ಪಕ್ಷ ಪದ್ದತಿಗಳಂತಹ ಹಲವಾರು ಲಕ್ಷಣಗಳ ಅಂಶಗಳನ್ನು ಒಳಗೊಂಡಿರುವುದರಿಂದ ಇದು ನಮ್ಮ ಹೆಮ್ಮೆಯ ಪ್ರತಿರೂಪವಾಗಿದೆ.

ಭಾರತವು ಅತೀ ಹೆಚ್ಚು ಜನಸಂಖ್ಯೆ ಹೊಂದಿದ ದೇಶವಾಗಿರುವುದರಿಂದ, ಇಲ್ಲಿ ವ್ಯಕ್ತಿ ವ್ಯಕ್ತಿಗಳ ನಡುವೆ ಭಿನ್ನತೆ ಸಹಜ. ರಾಜಕೀಯ ವಿಚಾರವಾಗಿ, ಧರ್ಮದ ವಿಚಾರವಾಗಿ, ಇತರೇ ಯಾವುದೇ ವಿಚಾರದಲ್ಲಿ ಸಮಾಜದಲ್ಲಿ ನೈತಿಕತೆ ಮತ್ತು ಮಾನವಿಯತೆಗಳು ಕುಸಿದಾಗ ಕಾನೂನು ಸುವ್ಯವಸ್ಥೆ ಕಾಪಡಲು ನಮ್ಮ ಸಂವಿಧಾನ ನೆರವಿಗೆ ಬರುತ್ತದೆ. ಇಂತಹ ನಮ್ಮ ಸಂವಿಧಾನವನ್ನು ಗೌರವಿಸುವುದು ನಮ್ಮ ನಿಮ್ಮೆಲ್ಲರ ಕರ್ತವ್ಯವಾಗಿದೆ. ಇದರ ಮಹತ್ವವನ್ನು ಮುಂದಿನ ಜನಾಂಗಕ್ಕೆ ತಿಳಿಯಪಡಿಸಬೇಕಿರುವುದೂ ಸಹ ಅಷ್ಟೇ ಸತ್ಯ. ಈ ದಿಶೆಯಲ್ಲಿ ನಾವು-ನೀವೆಲ್ಲಾ ಕಾರ್ಯಪ್ರವೃತ್ತರಾಗೋಣವೇ..

-ಎನ್.ಎನ್.ಕಬ್ಬೂರ
ಎಂ.ಎ ಬಿ.ಎಡ್
ತಾ-ಸವದತ್ತಿ

# ಎಸ್‌ಡಿಎ ಅಧಿಕಾರಿ ಆತ್ಮಹತ್ಯೆ



ಹಾಸನ: ಎಸ್ ಡಿಎ ಮಹಿಳಾ ಅಧಿಕಾರಿಯೊಬ್ಬ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿರುವ ಘಟನೆ ಹಾಸನ ಜಿಲ್ಲೆಯ ರಕ್ಷಣಾಪುರಂನಲ್ಲಿ ನಡೆದಿದೆ. 31 ವರ್ಷದ ಸುಚಿತ್ರಾ ಮೃತ ಮಹಿಳೆ. ಹಾಸನ ಜಿಲ್ಲಾಧಿಕಾರಿ ಕಚೇರಿಯಲ್ಲಿ ಗ್ರಾಮ್ ಒನ್ ಕೇಂದ್ರದಲ್ಲಿ ಎಸ್ ಡಿಎ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಸುಚಿತ್ರಾ ಅವರ ಪತಿ ಅಪಘಾತದಲ್ಲಿ ಮೃತಪಟ್ಟಿದ್ದರು. ಈ ಹಿನ್ನೆಲೆಯಲ್ಲಿ ಪತಿಯ ಹುದ್ದೆಯನ್ನು ಪತ್ನಿಗೆ ನೀಡಲಾಗಿತ್ತು. ಆದರೆ ಈಗ ಏಕಾಏಕಿ ರಕ್ಷಣಾಪುರಂ ಬಡಾವಣೆಯ ಮನೆಯಲ್ಲಿ ನೇಣಿಗೆ ಕೊರಳೊಡ್ಡಿದ್ದಾರೆ.

ಎಸ್ ಡಿಎ ಅಧಿಕಾರಿ ಸಾವಿಗೆ ನಿಖರ ಕಾರಣ ತಿಳಿದು ಬಂದಿಲ್ಲ. ಸ್ಥಳಕ್ಕೆ ಬಡಾವಣೆ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

# ಅಪ್ರಾಪ್ತ ಬಾಲಕಿ ಮೇಲೆ ಲೈಂಗಿಕ್ ಕಿರುಕಳ: ಪೊಲೀಸ್ ಅಧಿಕಾರಿ ಬಂಧನ

ಜಾರ್ಖಂಡ್: ಅಪ್ರಾಪ್ತ ಬಾಲಕಿ ಮೇಲೆ ವರ್ಷಗಳ ಕಾಲ ಲೈಂಗಿಕ್ ಕಿರುಕಳ ನೀಡಿದ ಪೊಲೀಸ್ ಅಧಿಕಾರಿಯನ್ನು ಬಂಧಿಸಿರುವ ಘಟನೆ ಜಾರ್ಖಂಡ್ನ ರಾಂಚಿಯಲ್ಲಿ ನಡೆದಿದೆ.

ಸಹಾಯಕ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಒಬ್ಬರನ್ನು ಒಂದು ವರ್ಷಕ್ಕೂ ಹೆಚ್ಚು ಕಾಲ ಅಪ್ರಾಪ್ತ ಬಾಲಕಿಯ ಮೇಲೆ ಲೈಂಗಿಕ್ ಕಿರುಕಳ ಮಾಡಿದ ಆರೋಪದ ಮೇಲೆ ಬಂಧಿಸಲಾಗಿದೆ.ಈ ವರ್ಷ ನವೆಂಬರ್ 14 ರಂದು ಬಾಲಕಿಯ ತಾಯಿ ಪೊಲೀಸ್ ಠಾಣೆಗೆ ಬಂದು ಪ್ರಕರಣ ದಾಖಲಿಸಿದ್ದಾರೆ. ನೀರಜ್ ಖೋಸ್ಲಾ ಎಂದು ಗುರುತಿಸಲಾದ ಎಎಸ್‌ಐ ಶುಕ್‌ದೇವ್ ನಗರ ಪೊಲೀಸ್ ಠಾಣೆಯಲ್ಲಿ ಕಳೆದ ವರ್ಷದಿಂದ ಅಪ್ರಾಪ್ತ ಬಾಲಕಿಯ ಮೇಲೆ ಅತ್ಯಾಚಾರ ನಡೆಸುತ್ತಿದ್ದ ಎನ್ನಲಾಗಿದೆ.

# ಧಾರವಾಡ: ಕ್ರಿಕೆಟ್ ಆಡುವಾಗ ವಿದ್ಯುತ್ ತಂತಿ ತಗುಲಿ 10ನೇ ತರಗತಿ ವಿದ್ಯಾರ್ಥಿ ಸಾವು

ಧಾರವಾಡ: ಆಟ ಆಡುವಾಗ ವಿದ್ಯುತ್ ತಂತಿ ತಗುಲಿ ಬಾಲಕನೋರ್ವ ಮೃತಪಟ್ಟ ಘಟನೆ ಧಾರವಾಡದ ಮದಿಹಾಳ ಬಡಾವಣೆಯಲ್ಲಿ ಶುಕ್ರವಾರ ನಡೆದಿದೆ. ಶ್ರೇಯಸ್ ಸಿನ್ನೂರು (16) ಮೃತ ಬಾಲಕ.

ವಿದ್ಯುತ್ ತಂತಿ ತಗುಲಿದ ತಕ್ಷಣ ಬಿಡಿಸಲು ಹೋಗಿದ್ದ ಮತ್ತೋರ್ವ ಬಾಲಕ ಗಾಯಗೊಂಡಿದ್ದಾರೆ. ಶ್ರೇಯಸ್ ಸ್ನೇಹಿತ ಪ್ರಣವ್ ಕೈಗೆ ಗಾಯವಾಗಿದೆ. ಸಂಜೆ ವೇಳೆ ಮನೆಯ ಮೇಲೆ ಹತ್ತಿದ ಬಾಲಕ ವಿದ್ಯುತ್ ತಂತಿ ತಗುಲಿ ಮೃತಪಟ್ಟಿದ್ದು, ಇನ್ನು ಗಾಯಗೊಂಡ ಪ್ರಣವ್ನನ್ನು ಸ್ಥಳೀಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಧಾರವಾಡ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ.

ಸಂಜೆ 5ಕ್ಕೆ ಶಾಲೆಯಿಂದ ಬಂದು ಮನೆಯಲ್ಲಿ ಮೊಬೈಲ್ ಹಿಡಿದು ಕುಳಿತಿದ್ದ, ಆಗ ಆಟ ಆಡಲು ಗೆಳೆಯ ಕರೆದಿದ್ದಾನೆ. ಆಗ ಹೊರಗೆ ಹೋಗಿದ್ದಾನೆ. ಇಬ್ಬರೂ ಪ್ರತಿದಿನ ಸಂಜೆ ಆಟ ಆಡುತ್ತಿದ್ದರು. ಚೆಂಡು ತೆಗೆದುಕೊಂಡು ಹೋಗಿದ್ದ ಆತ, ಹೋದ ಹತ್ತೇ ನಿಮಿಷದಲ್ಲಿ ಮಗ ಬಿದ್ದಿದ್ದಾನೆಂದು ಎಂದು ಕರೆದರು ಎಂದು ಘಟನೆ ಬಗ್ಗೆ ಶ್ರೇಯಸ್ ತಂದೆ ವಿವರಿಸಿದ್ದಾರೆ. ಓಡಿ ಹೋಗಿ ನೋಡಿದಾಗ ವಿದ್ಯುತ್ ತಗುಲಿತ್ತು. ಮನೆ ಬಳಿ ಕಟ್ಟಡ ಕಾಮಗಾರಿ ನಡೆದಿದೆ. ಅಲ್ಲಿ ಆಟ ಆಡುತ್ತಿದ್ದರು. ಗೆಳೆಯ ಎಸೆದ ಬಾಲು ಹಿಡಿಯಲು ಹೋದಾಗ ವಿದ್ಯುತ್ ತಗುಲಿದೆ. ಕೈಯಿಂದ ಹೊಟ್ಟೆಯವರೆಗೆ ವಿದ್ಯುತ್ ಶಾಕ್ ಹೊಡೆದಿತ್ತು. ತಕ್ಷಣ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇವೆ. ನಾನು ವೈದ್ಯರ ಕಾಲಿಗೂ ಬಿದ್ದು, ಮಗನನ್ನು ಉಳಿಸಿಕೊಡುವಂತೆ ಕೇಳಿದೆ.

ಆದರೆ ಮಗ ಉಳಿಯಲಿಲ್ಲ. ಮಗ ನಗರದ ರಾಜೀವ್ ಗಾಂಧಿ ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ಓದುತ್ತಿದ್ದ. ಆತನನ್ನು ಉಳಿಸಲು ಇನ್ನೋರ್ವ ಬಾಲಕ ಪ್ರಯತ್ನ ಪಟ್ಟಿದ್ದಾನೆ. ಆತನಿಗೂ ಗಾಯವಾಗಿದೆ. ಆತನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಶ್ರೇಯಸ್ ನನಗೆ ಒಬ್ಬನೇ ಮಗ ಎಂದು ಗೋಳಾಡಿದರು. ಈ ಸಂಬಂಧ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

## ಜ್ಞಾನ ವಿಕಾಸ ತಾಲೂಕು ಮಟ್ಟದ ಮಹಿಳಾ ಸಾಧನಾ ಸಮಾವೇಶ, ವಿಚಾರ ಗೋಷ್ಠಿ ಕಾರ್ಯಕ್ರಮ ಉದ್ಘಾಟನೆ

# ಮಹಿಳೆಯರು ಎಲ್ಲಾ ರಂಗದಲ್ಲಿ ಅಭಿವೃದ್ಧಿ ಹೊಂದಲಿ: ಪ್ರಾದೇಶಿಕ ನಿರ್ದೇಶಕ ವಸಂತ ಸಾಲಿಯಾನ

ಬೆಳಗಾವಿ: "ಪ್ರತಿಯೊಬ್ಬ ಮಹಿಳೆಯರು ಜ್ಞಾನ ವಿಕಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಬೇಕು" ಎಂದು ಧಾರವಾಡ ಪ್ರಾದೇಶಿಕ ನಿರ್ದೇಶಕರಾದ ವಸಂತ ಸಾಲಿಯಾನ ಹೇಳಿದರು.

ಅನಗೋಳ ಗ್ರಾಮದ ಆದಿನಾಥ ಸಭಾಭವನದಲ್ಲಿ ಶ್ರೀ ಕ್ಷೇತ್ರಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿಸಿ ಟ್ರಸ್ಟ್ ಬೆಳಗಾವಿ ತಾಲೂಕು ಮಹಿಳಾ ಜ್ಞಾನವಿಕಾಸ ವತಿಯಿಂದ ಆಯೋಜಿಸಿದ್ದ ತಾಲೂಕು ಮಟ್ಟದ ಮಹಿಳಾ ಸಾಧನಾ ಸಮಾವೇಶ ಮತ್ತು ವಿಚಾರಗೋಷ್ಠಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು,

ಮಹಿಳೆಯರು ದೃಢ ನಿರ್ಧಾರ ಮಾಡಬೇಕಿದೆ. ಜೀವನದಲ್ಲಿ ತಾವು ಬೆಳೆದು ಇನ್ನೊಬ್ಬರಿಗೆ ಬೆಳಕಾಗುವ ಗುರಿ ಯಲ್ಲಿ ನಾವು ಸಾಗಬೇಕಿದೆ. ಮಹಿಳೆಯರು ಎಲ್ಲಾ ರಂಗದಲ್ಲಿ ನೆಲೆಯೂರಿ ಮಾತೃಶೀ ಹೇಮಾವತಿ ವೀ. ಹೆಗ್ಗಡೆ ಅಮ್ಮನವರ ಕನಸನ್ನು ಇಡೇರಿಸಬೇಕು ಎಂದು ತಿಳಿಸಿದರು.



ಮಹಿಳಾ ಕಲ್ಯಾಣ ಸಂಸ್ಥೆಯ ನಿರ್ದೇಶಕರಾದ ಸುರೇಖಾ ಪಾಟೀಲ ಮಾತನಾಡಿ, ಮಕ್ಕಳ ನೈತಿಕ ಶಿಕ್ಷಣದಲ್ಲಿ ತಂದೆ ತಾಯಿಗಳ ಪಾತ್ರ ಎಂಬ ವಿಷಯದ ಬಗ್ಗೆ ವಿಚಾರಗಳನ್ನು ಮಂಡಿಸಿ, ಮಕ್ಕಳ ಪಾಲನೆ ಪೋಷಣೆ, ಉತ್ತಮ ಸಂಸ್ಕಾರ ನೀಡುವಲ್ಲಿ ತಂದೆ ತಾಯಿಗಳ ಪಾತ್ರ ಬಹಳ ಮುಖ್ಯವಾಗಿದೆ.

ಮಕ್ಕಳನ್ನು ದುಶ್ಚಟಕ್ಕೆ ದಾಸರಾಗದಂತೆ ನೋಡಿಕೊಳ್ಳುವುದು ಮುಖ್ಯ. ಮಕ್ಕಳು ವಯಸ್ಸಿಗೆ ಬಂದಾಗ ಉತ್ತಮ ದಾರಿ ತೋರಿಸಬೇಕು ಎಂದರು.

ಗೀತಾ ಶೇಕಪ್ಪ ಕಡಗದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.ಅತಿಥಿಗಳಾಗಿ ಜಿ ಆರ್ ಸೋನಿರ್ ವಕೀಲರು, ಜಿಲ್ಲಾ ನಿರ್ದೇಶಕ ಸತೀಶ ನಾಯ್ಕ, ಜ್ಞಾನ ವಿಕಾಸ ಪ್ರಾದೇಶಿಕ ಯೋಜನಾಧಿಕಾರಿ ಮಲ್ಲಿಕಾ, ಯೋಜನಾಧಿಕಾರಿಗಳು ನಾಗರಾಜ್ ಹದ್ಲಿ, ಒಕ್ಕೂಟದ ಪದಾಧಿಕಾರಿಗಳು, ಕೇಂದ್ರದ 1000 ಕ್ಕೂ ಹೆಚ್ಚು ಸದಸ್ಯರು ಭಾಗವಹಿಸಿದ್ದರು.

ಕೇಂದ್ರದ ಸಂಯೋಜಕೀಯರು ಹಾಗೂ ಮೇಲ್ವಿಚಾರಕರಾದ ಸಂಗೀತಾ ಪೂಜಾರ, ಪ್ರಭಾವತಿ ಯಾವಗಲ್, ನಾಗಪ್ಪ ಗೌಡ, ಜ್ಞಾನವಿಕಾಸ ಸಮನ್ವಯ ಅಧಿಕಾರಿ ಲಲಿತಾ ಮುಕ್ರಿ, ಉಪಸ್ಥಿತರಿದರು. ಮೇಲ್ವಿಚಾರಕರಾದ ವೈಶಾಲಿ ನಿರೂಪಿಸಿ, ವಂದಿಸಿದರು.

# ಹುಬ್ಬಳ್ಳಿ, ಧಾರವಾಡ ಮತ್ತು ಬೆಳಗಾವಿ ಸೇರಿ ಕರ್ನಾಟಕದ 54 ಪಟ್ಟಣಗಳಲ್ಲಿ ರಿಲಯನ್ಸ್ ಜಿಯೋ ಏರ್ ಫೈಬರ್ ಸೇವೆ ಆರಂಭ

ಹುಬ್ಬಳ್ಳಿ: ಜಿಯೋ ಕರ್ನಾಟಕದ 54 ಪಟ್ಟಣಗಳಲ್ಲಿ ಗೃಹ ಮನರಂಜನೆ, ಸ್ಮಾರ್ಟ್ ಹೋಮ್ ಸೇವೆಗಳು ಮತ್ತು ಹೈಸ್ಪೀಡ್ ಬ್ರಾಡ್ಬ್ಯಾಂಡ್ ಗಾಗಿ ಅದರ ಸಂಯೋಜಿತ ಎಂಡ್–ಟು–ಎಂಡ್ ಪರಿಹಾರವಾದ ಜಿಯೋ ಏರ್ ಫೈಬರ್ ಸೇವೆಗಳನ್ನು ಪ್ರಾರಂಭಿಸುವುದಾಗಿ ಘೋಷಿಸಿತು.

ಹುಬ್ಬಳ್ಳಿ, ಧಾರವಾಡ ಮತ್ತು ಬೆಳಗಾವಿ ಸೇರಿ ಕರ್ನಾಟಕದ 54 ಪಟ್ಟಣಗಳಲ್ಲಿ ಜಿಯೋ ಏರ್‌ಫೈಬರ್‌ನ ಸೇವೆಲಭ್ಯವಿದೆ.

ಈ ಸೇವೆಯನ್ನು ಸೆಪ್ಟೆಂಬರ್ 19




ರಂದು ರಾಷ್ಟ್ರವ್ಯಾಪಿ ಬಿಡುಗಡೆ ಮಾಡಲಾಗಿತ್ತು.ಈ ಮೂಲಕ ದೇಶಾದ್ಯಂತ ಸಮುದಾಯಗಳಿಗೆ ಅತ್ಯಾಧುನಿಕ ಸಂಪರ್ಕ ಪರಿಹಾರಗಳನ್ನು ಒದಗಿಸುವ ಜಿಯೋದ ಬದ್ಧತೆಯನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆ.

ಜಿಯೋಏರ್ ಫೈಬರ್ ಯೋಜನೆಯು 599 ರೂ.ಗೆ 30 ಎಂಬಿಪಿಎಸ್ ವೇಗದಲ್ಲಿ ಅನಿಯಮಿತ ಡೇಟಾವನ್ನು ನೀಡುತ್ತದೆ. ಅಲ್ಲದೆ, 899 ರೂ ಮತ್ತು ರೂ 1199 ರೂ. ಗೆ 100 ಎಂಬಿಪಿಎಸ್ ವೇಗದ ಯೋಜನೆಗಳು ಲಭ್ಯವಿದೆ. 599 ರೂ ಮತ್ತು 899 ರೂ ಯೋಜನೆಗಳೊಂದಿಗೆ 14 ಓಟಿಟಿ ಅಪ್ಲಿಕೇಶನ್‌ಗಳು ಲಭ್ಯವಿದ್ದರೆ, 1199 ರೂ ಯೋಜನೆಯು ನೆಟ್ ಫ್ಲೆಕ್ಸ್ , ಅಮೆಜಾನ್ ಪ್ರೈಮ್ ಮತ್ತು ಜಿಯೋ ಸಿನಿಮಾ ಪ್ರೀಮಿಯಂ ಸೇರಿದಂತೆ 17 ಓಟಿಟಿ ಪ್ಲಾಟ್‌ಫಾರ್ಮ್‌ಗಳನ್ನು ನೀಡುತ್ತದೆ.

ಜಿಯೋಏರ್ ಫೈಬರ್ ಅತ್ಯುತ್ತಮ ಗುಣಮಟ್ಟದ ಮೌಲ್ಯಾಧಾರಿತ ಸೇವೆಗಳನ್ನು ಒಳಗೊಂಡಂತೆ, ಅಲ್ಲದೇ ರಿಲಯನ್ಸ್ ಜಿಯೋ ಫೈಬರ್ ಯೋಜನೆಗಳನ್ನು ಒದಗಿಸಲು ಸಜ್ಜಾಗಿದೆ.

# ಡಿ. 3 ರಂದು ದಿಗಂಬರ ಜೈನ ವಧು ವರ ಪರಿಚಯ ಸಮಾವೇಶ

ಬೆಳಗಾವಿ: ಭಾರತೀಯ ಜೈನ ಸಂಘಟನಾ ಬೆಳಗಾವಿ ಹಾಗೂ ಭರತೇಶ ಶಿಕ್ಷಣ ಸಂಸ್ಥೆಯ ಬೆಳಗಾವಿ ಇವರ ಸಂಯುಕ್ತಾಶ್ರಯದಲ್ಲಿ ಇದೆ ಡಿಸೆಂಬರ 3 ರಂದು ಬೆಳಗಾವಿಯ ಮಿಲೇನಿಯಂ ಗಾರ್ಡನದಲ್ಲಿ ದಿಗಂಬರ ಜೈನ ವಧು ವರ ಪರಿಚಯ ಸಮಾವೇಶ ನಡೆಯಲಿದೆ.

ಈ ಸಮಾವೇಶದಲ್ಲಿ ಕರ್ನಾಟಕ, ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಗಳಲ್ಲಿನ ದಿಗಂಬರ ಜೈನ ವಧು ವರ ರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲಿದ್ದಾರೆ. ಈ ಸಮಾವೇಶದಲ್ಲಿ ಭಾಗವಹಿಸಲು ಹೆಸರು ನೊಂದಾಯಿಸಬೇಕಾಗುತ್ತದೆ. ಹೆಸರು ನೊಂದಣಿಯ ಕೊನೆಯ ದಿನಾಂಕ 28–11–23 ಆಗಿದ್ದು, ಹೆಚ್ಚಿನ ಮಾಹಿತಿಗಾಗಿ ಅನುರಾಧಾ ತಿಗಡಿ ಮೊ: 7090942984 ಇಲ್ಲಿ ಸಂಪರ್ಕಿಸುವಂತೆ ಭಾರತೀಯ ಜೈನ ಸಂಘಟನೆಯ ರಾಜ್ಯ ಕಾರ್ಯದರ್ಶಿ ಶ್ರೀಪಾಲ ಖೇಮಲಾಪೂರೆ, ಬೆಳಗಾವಿ ವಿಭಾಗದ ಅಧ್ಯಕ್ಷ ಅರುಣ ಯಲಗುದ್ರಿ, ಕಾರ್ಯದರ್ಶಿ ಹೀರಾಚಂದ ಕಲಮನಿ ಇವರು ಪ್ರಕಟಣೆಯಲ್ಲಿ ಕೋರಿದ್ದಾರೆ.

# 'ಒಬ್ಬಟ್ಟು' ಚಲನಚಿತ್ರದ ಡಬ್ಬಿಂಗ್ ಮುಕ್ತಾಯ

ಬೆಂಗಳೂರ: ಕೀರ್ತನಾ ಮೂವ್ಹಿ ಮೇಕರ್ಸ್ ಅವರ ಲೋಕೇಶ್ ವಿದ್ಯಾಧರ ಅವರ ನಿರ್ದೇಶನದ 'ಒಬ್ಬಟ್ಟು' ನಗೆ ಹೂರಣದ ಹಬ್ಬ ಕನ್ನಡ ಚಲನಚಿತ್ರದ ಡಬ್ಬಿಂಗ್ ಕಾರ್ಯ(ಧ್ವನಿಮುದ್ರಣ ಕಾರ್ಯ) ಮುಕ್ತಾಗೊಂಡಿದೆ.

ಹಾಸ್ಯಭರಿತ ಕಥಾಸಾರ ಹೊಂದಿದ ಈ 'ಒಬ್ಬಟ್ಟು' ಚಿತ್ರೀಕರಣವನ್ನು ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕು, ಹಲಗೂರು ಹೋಬಳಿ ಸಾಗ್ಯ ಸರಗೂರು ಗ್ರಾಮದಲ್ಲಿ ಮಾಡಲಾಗಿದೆ. ಯುಗಾದಿ ಹಬ್ಬದಲ್ಲಿ ನಡೆಯವ ಒಂದು ಪ್ರೇಮ ಕಥೆ.

ಇಬ್ಬರು ಪ್ರೇಮಿಗಳ ಮಧ್ಯೆ ಬೀಳುವ ಒಂದು ಹೆಣದ ಸುತ್ತ ನಡೆಯುವ ಹಾಸ್ಯ ಭರಿತ ಚಿತ್ರ ಇದಾಗಿದ್ದು ಕೊಲೆ ಹೇಗಾಯಿತು? ಯಾಕಾಯಿತು? ಎನ್ನುವ ಕುತೂಹಲದ ನಡುವೆ ಕೊಲೆರಹಸ್ಯ ಭೇದಿಸುವ ಒಂದು ಹಾಸ್ಯಪೂರಿತ ಮನರಂಜನೆಯನ್ನೊಳಗೊಂಡ ಕಥೆ. ಒಬ್ಬಟ್ಟಿನ ರುಚಿಯನ್ನು ಥೇಟರಗಳಲ್ಲೇ ಪ್ರೇಕ್ಷಕರು ಬಂದು ನಗೆಹೂರಣದ ಸವಿಯನ್ನು ಸವಿಯಬೇಕು ಎಂದು ನಿರ್ದೇಶಕ ಲೋಕೇಶ ವಿದ್ಯಾಧರ ಹೇಳುತ್ತಾರೆ.

ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ಸರಳ ಸುಂದರ ನಾಯಕ ಅಮೀತ್‌ರಾವ್, ನಗು ಮೊಗದ ಚೆಲುವೆ ಕಿರುತೆರೆ,ಚಲನಚಿತ್ರ ಕಲಾವಿದೆ ಸುನಂದ ಕಲ್ಬುರ್ಗಿ, ಲೋಕೇಶ್ ವಿದ್ಯಾಧರ,



ಮಂಡ್ಯ ನಾಗರಾಜ್, ಮುತ್ತುರಾಜ್.ಟಿ, ರಾಜು ಅರಸಿಕೆರೆ, ರೋಹಿಣಿ, ಧನಲಕ್ಷ್ಮೀ, ಸತೀಶ್ ಶೆಟ್ಟಿ, ದಿವ್ಯಾ ಆಲೂರ, ರವಿ ,ನಂಜಪ್ಪ ಡಿ.ಎಸ್ ಮುಂತಾದವರು ಅಭಿನಯಿಸಿದ್ದಾರೆ.

ತಾಂತ್ರಿಕ ವರ್ಗದಲ್ಲಿ ಒಬ್ಬಟ್ಟನ್ನು ತನ್ನ ಕಣ್ಣಂಚಿನಲ್ಲಿ ಸರೆಹಿಡಿದವರು ( ಛಾಯಾಗ್ರಹಣ) ಬೆಟ್ಟೇಗೌಡ ಕೀಲಾರ ಒಬ್ಬಟ್ಟೆಂದು ಅಬ್ಬರಿಸಿ ಬೊಬ್ಬರಿದವರು (ಸ್ವರ ಸಂಯೋಜನೆ ಮತ್ತು ಹಾಡುಗಾರಿಕೆ) ಎ.ಪಿ. ರವಿಕೀರ್ತಿ, ಒಬ್ಬಟ್ಟನ್ನು ದಬಾಕಿದವರು (ನೃತ್ಯ ) ಅಲ್ಲಿನ್.ಎ, ಒಬ್ಬಟ್ಟಿಗೆ ಮೈದಾ ಮಿದ್ದಿದವರು (ಸಾಹಸ) ಸೂರ್ಯ, ಒಬ್ಬಟ್ಟಿನ ರೂಪಕೊಟ್ಟವರು (ಸಂಕಲನ) ಸಂಜೀವರೆಡ್ಡಿ, ಒಬ್ಬಟ್ಟಿಗೆ ಬಣ್ಣ ಹಂಚಿದವರು ಯತೀಶ, ಒಬ್ಬಟ್ಟು ಒಬ್ಬಟ್ಟೆಂದು ಗಲ್ಲಿ ಗಲ್ಲಿಗೆ ಸುದ್ದಿ ಗುಲ್ಲೆಬ್ಬಿಸಿದವರು (ಪತ್ರಿಕಾ ಸಂಪರ್ಕ) ಡಾ.ಪ್ರಭು ಗಂಜಿಹಾಳ, ಡಾ. ವೀರೇಶ್ ಹಂಡಿಗಿ, ಒಬ್ಬಟ್ಟಿಗೆ ರುಚಿಕೊಟ್ಟವರು (ಸಹಕಾರ )ಆನಂದ ಆರ್ಟ್ಸ್, ಒಬ್ಬಟ್ಟು ತಯಾರಿಸಲು ಸಹಾಯ ಮಾಡಿದವರು.

(ಸಹ ನಿರ್ದೇಶಕ) ವಿಷ್ಣುವರ್ಧನ, ಒಬ್ಬಟ್ಟಿಗೆ ತುಪ್ಪಸುರಿದವರು (ಸಹ ನಿರ್ಮಾಪಕರು ) ಸುನಂದ ಕಲ್ಬುರ್ಗಿ, ಜೀವನ್ ಕುಮಾರ್. ಬಿ.ಆರ್, ಒಬ್ಬಟ್ಟಿನ ರೂಪ ವೇಷ ಕೊಟ್ಟವರು ( ಕಥೆ, ಚಿತ್ರಕಥೆ, ಸಂಭಾಷಣೆ, ನಿರ್ದೇಶನ) ಲೋಕೇಶ್ ವಿದ್ಯಾಧರ, ಒಬ್ಬಟ್ಟಿಗೆ ಬೇಳೆ, ಬೆಲ್ಲ, ಕಾಯಿ ಕೊಡಿಸಿದವರು ( ನಿರ್ಮಾಪಕರು) ಲೋಕೇಶ್ ವಿದ್ಯಾಧರ ಆಗಿದ್ದಾರೆ.

# ಪಟ್ಟು ಬಿಡದ ಅತಿಥಿ ಉಪನ್ಯಾಸಕರು: ಮುಂದುವರಿದ ಮುಷ್ಕರ



ತುಮಕೂರು: ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ನಗರದಲ್ಲಿ ಅತಿಥಿ ಉಪನ್ಯಾಸಕರು ನಡೆಸುತ್ತಿರುವ ಅನಿರ್ಧಿಷ್ಟಾವಧಿ ಪ್ರತಿಭಟನೆ ಎರಡನೇ ದಿನ ಪೂರೈಸಿದ್ದು, ಪ್ರತಿಭಟನೆ ಮುಂದುವರಿದಿದೆ.

ಪ್ರತಿಭಟನೆ ಕುರಿತು ಮಾತನಾಡಿದ ಅತಿಥಿ ಉಪನ್ಯಾಸಕರ ಸಂಘದ ಜಿಲ್ಲಾಧ್ಯಕ್ಷ ಡಾ. ಧರ್ಮವೀರ, ಈ ಹಿಂದೆ ವಿರೋಧ ಪಕ್ಷದ ನಾಯಕರಾಗಿದ್ದ ಸಿದ್ದರಾಮಯ್ಯನವರು ಬೆಳಗಾವಿ ಅಧಿವೇಶನದಲ್ಲಿ ಅತಿಥಿ ಉಪನ್ಯಾಕರ ಪರವಾಗಿ ಧ್ವನಿ ಎತ್ತಿದ್ದರು. ಇಂದು ಸಿದ್ದರಾಮಯ್ಯನವರ ಸರ್ಕಾರ ರಾಜ್ಯದಲ್ಲಿ ಇದೆ. ನುಡಿದಂತೆ ನಡೆಯುವ ಸಿದ್ದರಾಮಯ್ಯನವರು ಅತಿಥಿ ಉಪನ್ಯಾಸಕರಿಗೆ ಶಾಶ್ವತವಾದ ಭದ್ರತೆ ಮತ್ತು ಕಾಯಾಮಾತಿಯನ್ನು ಮಾಡುವವರೆಗೂ ನಮ್ಮ ಅನಿದಿಷ್ಟಾವಧಿಯ ಧರಣಿ ಮುಂದುವರೆಯುತ್ತದೆ ಎಂದು ಒತ್ತಾಯಿಸಿದರು.

ಯಾವುದೇ ಸರ್ಕಾರಿ ಸೌಲಭ್ಯಗಳಿಲ್ಲದೆ ದುಡಿಯುತ್ತಿರುವ ಏಕೈಕ ವರ್ಗವೆಂದರೆ ಅದು ಅತಿಥಿ ಉಪನ್ಯಾಸಕರು, ಸರ್ಕಾರ ಕೂಡಲೇ ನಮ್ಮ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿದರು.

ಮಹಿಳಾ ಅತಿಥಿ ಶಿಕ್ಷಕಿ ಡಾ. ಕವಿತಾ ಮಾತನಾಡಿ, ಅತಿಥಿ ಶಿಕ್ಷಕರಿಗೆ ಯಾವುದೇ ರಜೆ ಇಲ್ಲದೆ, ಕನಿಷ್ಠ ವೇತನವೂ ಇಲ್ಲದೆ, ಯಾವುದೇ ಸರ್ಕಾರಿ ಸೌಲಭ್ಯಗಳಿಲ್ಲದೆ ದುಡಿಯುತ್ತಿದ್ದಾರೆ. ಬೇರೆ –ಬೇರೆ ಇಲಾಖೆಗಳಂತೆ ಅತಿಥಿ ಶಿಕ್ಷಕರನ್ನು ಪರಿಗಣಿಸಿ ಶಾಶ್ವತ ಭದ್ರತೆ ಮತ್ತು ಖಾಯಾಮಾತಿಯನ್ನು ಒದಗಿಸಬೇಕು. ಸುಮಾರು 10– 15 ವರ್ಷಗಳಿಂದ ಅತಿಥಿ ಶಿಕ್ಷಕರಾಗಿ ದುಡಿಯುತ್ತಿರುವ ನಮಗೆ ಬೇರೆ ಯಾವುದೇ ವೃತ್ತಿ ಮಾಡಲು ಸಾಧ್ಯವಾಗುತ್ತಿಲ್ಲ. ಅತಿಥಿ ಉಪನ್ಯಾಸಕರನ್ನು ವಿಶೇಷ ಪ್ರಕರಣ ಎಂದು ಪರಿಗಣಿಸಿ, ಸೇವಾ ಭದ್ರತೆ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಹಿರಿಯ ಅತಿಥಿ ಉಪನ್ಯಾಸಕ ಕೆಂಚರಾಯಪ್ಪ ಮಾತನಾಡಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶೇ.80ರಷ್ಟು ಅತಿಥಿ ಉಪನ್ಯಾಸಕರು ಸೇವೆ ಸಲ್ಲಿಸುತ್ತಿದ್ದಾರೆ. ರಾಜ್ಯಾದ್ಯಂತ ಸುಮಾರು 14 ಸಾವಿರ ಅತಿಥಿ ಉಪನ್ಯಾಸಕರಿದ್ದು ನಾವು ಸುಮಾರು 20 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದು ಈ ಬಾರಿ ಮಾಡು ಇಲ್ಲವೇ ಮಡಿ ಎಂಬ ಧ್ಯೇಯ ವಾಕ್ಯದೊಂದಿಗೆ ನಾವುಗಳು ಹೋರಾಟ ಪ್ರಾರಂಭಿಸಿದ್ದೇವೆ. ಸರ್ಕಾರ ನಮಗೆ ಲಿಖಿತ ರೂಪದ ಆದೇಶ ನೀಡುವವರೆಗೂ ನಮ್ಮ ಹೋರಾಟ ಮುಂದುವರೆಯುತ್ತದೆ ಎಂದರು. ಪ್ರತಿಭಟನೆಯಲ್ಲಿ ಅತಿಥಿ ಶಿಕ್ಷಕರುಗಳಾದ ಹೇಮಾವತಿ, ಅನಿತಾ, ಅಂಬಿಕಾ, ಭವ್ಯ, ಗಿರೀಶ್, ಎರ್ರಿಸ್ವಾಮಿ, ವೇದಮೂರ್ತಿ, ಶಿವಣ್ಣ ತಿಮ್ಮಲಾಪುರ, ಶಂಕರಪ್ಪ ಹಾರೋಗೆರೆ, ಶಶಿ, ಚಿತ್ತಯ್ಯ, ಕಾಂತರಾಜು ಸೇರಿದಂತೆ ನೂರಾರು ಅತಿಥಿ ಉಪನ್ಯಾಸಕರು ಭಾಗವಹಿಸಿದ್ದರು.

# ಅಥರ್ವ ಕಾಲೇಜಿನಲ್ಲಿ ಶಿಕ್ಷಣದೊಂದಿಗೆ ಸಂಸ್ಕಾರವು ಲಭಿಸುತ್ತಿದೆ: ಡಿಡಿಪಿಯು ಪಿ. ಐ. ಭಂಡಾರಿ ಅಭಿಮತ

ಬೆಳಗಾವಿ: ವಿದ್ಯಾರ್ಥಿಗಳಿಗೆ ಪಠ್ಯ ಕಲಿಕೆಯ ಜೊತೆಗೆ ಸಂಸ್ಕೃತಿ, ಸಂಸ್ಕಾರ, ಬದುಕುವ ಕಲೆ ಹೇಳಿಕೊಡುವುದು ಅವರ ವ್ಯಕ್ತಿತ್ವವನ್ನು ಶ್ರೇಷ್ಠವಾಗಿ ರೂಪಿಸುತ್ತದೆ. ಈ ನಿಟ್ಟಿನಲ್ಲಿ ಅಥರ್ವ ಕಾಲೇಜಿನ ಚಟುವಟಿಕೆಗಳು ಅನುಕರಣೀಯವಾಗಿವೆ ಎಂದು ಚಿಕ್ಕೋಡಿ ಡಿಡಿಪಿಯು ಪಿ. ಐ. ಭಂಡಾರಿ ಹೇಳಿದರು.

ನಾಗನೂರ ಪಟ್ಟಣದ ಅಥರ್ವ ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯದಲ್ಲಿ ನಡೆದ ಚಿಕ್ಕೋಡಿ ಜಿಲ್ಲೆಯ ಪದವಿಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾಮಟ್ಟದ ಸ್ಪರ್ಧೆಗಳನ್ನು ಉದ್ಘಾಟಿಸಿ ಮಾತನಾಡಿದ ಅವರು ಅಥರ್ವ ಕಾಲೇಜು ಗ್ರಾಮೀಣ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುತ್ತಿದೆ. ಕಡಿಮೆ ಅವಧಿಯಲ್ಲಿ ಪ್ರತಿಷ್ಠಿತ ಕಾಲೇಜು ಆಗಿ ಹೊರಹೊಮ್ಮಿದೆ. ಈ ಬಾರಿಯ ವಾರ್ಷಿಕ ಪರೀಕ್ಷೆಯಲ್ಲಿ



ಮತ್ತಷ್ಟು ನೀರಿಕ್ಷೆಗಳನ್ನು ಈ ಕಾಲೇಜಿನಿಂದ ಎದುರು ನೋಡುತ್ತಿದ್ದೇವೆ ಎಂದರು.

ಮಕ್ಕಳಿಗೆ ಪಠ್ಯದ ಜೊತೆಗೆ ಸಂಸ್ಕೃತಿಕ ಸ್ಪರ್ಧೆಗಳು ಸರ್ವಾಂಗೀಣ ಅಭಿವೃದ್ದಿಗೆ ಬಲ ತುಂಬುತ್ತವೆ. ಮಕ್ಕಳ ಹವ್ಯಾಸವನ್ನು ಪಾಲಕರು, ಶಿಕ್ಷಕರು ಗುರುತಿಸಿ ವಿಭಿನ್ನ ಕ್ಷೇತ್ರಗಳಲ್ಲಿ ಅವರನ್ನು ತೊಡಗಿಸಿ ದೇಶದ ಆಸ್ತಿಯನ್ನಾಗಿಸಬೇಕು. ಈ ಉದ್ದೇಶದಿಂದ ಇಲಾಖೆಯು ಪ್ರತಿವರ್ಷ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸುತ್ತದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಚಂದರಗಿ ಕ್ರೀಡಾ ಶಾಲೆ ಅಧ್ಯಕ್ಷ ಬಿ. ಆರ್. ಪಾಟೀಲ ಮಾತನಾಡಿ ಪ್ರತಿ ಮಗುವಿನಲ್ಲಿ ಸೂಪ್ತ ಪ್ರತಿಭೆ ಅಡಗಿದೆ. ಅದನ್ನು ಹೊರತೆಗೆದು ಜಗತ್ತಿಗೆ ಅನಾವರಣಗೊಳಿಸುವ ಕೆಲಸವನ್ನು ಶಾಲೆಗಳು ಮಾಡಬೇಕು. ನಮ್ಮ ಮಕ್ಕಳ ಜ್ಞಾನ, ಚಾಣಾಕ್ಷತೆ ದೇಶಕ್ಕೆ ಉಪಯೋಗವಾಗಬೇಕು. ಮಕ್ಕಳನ್ನು ಸಮಾಜಮುಖಿಯನ್ನಾಗಿ ಬೆಳೆಸಬೇಕು ಎಂದರು. 8 ತಾಲೂಕುಗಳಿಂದ 200ಕ್ಕೂ ಅಧಿಕ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ಪ್ರಶಸ್ತಿ ವಿಜೇತರಿಗೆ ಯುವ ಧುರೀಣ ಸರ್ವೋತ್ತಮ ಜಾರಕಿಹೊಳಿ, ಕೆಂಚಗೌಡ ಪಾಟೀಲ ಬಹುಮಾನ ವಿತರಿಸಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ನಿರ್ದೇಶಕ ಡಾ. ಸಂತೋಷ ಮಿರ್ಜಿ, ಚೇತನ ಜೋಗನ್ನವರ ಪ್ರಾಸ್ತಾವಿಕವಾಗಿ ಮಾತನಾಡಿದರು, ಸಂಸ್ಥೆಯ ಅಧ್ಯಕ್ಷರಾದ ವೆಂಕಟೇಶ ಜಂಬಗಿ, ಪ್ರಾಚಾರ್ಯ ಗಿರೀಶ ಗೋರಬಾಳ, ಅರುಣ ಪೂಜೇರ, ವ್ಹಿ.ಡಿ ನರವಾಡೆ, ಚನ್ನಬಸು ಬಡ್ಡಿ, ಬಸವರಾಜ ಕರಿಹೋಳಿ, ಗೋಪಾಲ ಪೂಜೇರಿ, ಎಂ. ಎಸ್. ಪಾಟೀಲ, ಎಚ್. ಎಂ. ನಾಯಿಕ, ಗಂಗಾಧರ ಮಳಗಿ, ರಾಜೇಂದ್ರ ಪಾಟೀಲ, ಮಂಜುನಾಥ ಹಟ್ಟಿ, ಮುತ್ತು ಹಳಿಗೌಡ್ರ ಉಪಸ್ಥಿರಿದ್ದರು. ಆರ್. ಸಿ. ನಿರ್ವಾಣಿ, ಸ್ವಾಗತಿಸಿದರು, ಸಂಜು ವಾಲಿ ವಂದಿಸಿದರು ಸಿದ್ದೇಶ್ವರ ಮೆಳವಂಕಿ ನಿರೂಪಿಸಿದರು.

# ಒಂದು ತಿಂಗಳಲ್ಲಿ ಕಾಂಗ್ರೆಸ್ ಸರ್ಕಾರ ಗುತ್ತಿಗೆದಾರರ ಬಾಕಿ ಬಿಲ್ಲು ಕೊಡದೆ ಇದ್ದರೆ ಸರ್ಕಾರದ ವಿರುದ್ಧ ಪ್ರತಿಭಟನೆ

ಬೆಳಗಾವಿ: ಶ್ರೀನಿಜಗುಣಾನಂದ ಸ್ವಾಮೀಜಿ ಮಾತನಾಡಿ ರಾಜ್ಯ ಗುತ್ತಿಗೆದಾರ ಸಂಘಕ್ಕೆ ಸದಾ ನಮ್ಮ ಬೆಂಬಲ ಇರುತ್ತದೆ ಆದರೆ ಗುತ್ತೇದಾರರ ಸಂಘ ಯಾವಾಗಲೂ ಒಂದೇ ಆಗಿರಬೇಕು ಒಂದು ಬಿಜೆಪಿ ಒಂದು ಕಾಂಗ್ರೆಸ್ ಸಂಘ ಆಗಿರಬಾರದು ಬೆಳಗಾವಿ ಜಿಲ್ಲೆಯಲ್ಲಿ ಗುತ್ತಿದಾರರ ಬಾಕಿ ಬಿಲ್ಲು 600 ಕೋಟಿ ಇದೆ ಆದರೆ ರಾಜ್ಯ ಸರ್ಕಾರ 5 ಗ್ಯಾರಂಟಿಗಳನ್ನು ಜಾರಿ ಮಾಡಿ ಸಂಕಟದಲ್ಲಿ ಸಿಲುಕಿಕೊಂಡಿದೆ ಎಂದರು. ರಾಜ್ಯ ಕಾರ್ಯನಿರತ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ.ಕೆಂಪಣ್ಣ ಮಾತನಾಡಿ,

ಇನ್ನು ಒಂದು ತಿಂಗಳಲ್ಲಿ ಕಾಂಗ್ರೆಸ್ ಸರ್ಕಾರ ಗುತ್ತಿಗೆದಾರರ ಬಿಲ್ಲುಗಳನ್ನು ಕೊಡದೆ ಇದ್ದರೆ ರಾಜ್ಯ ಗುತ್ತಿಗೆದಾರ ಸಂಘದಿಂದ ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆ ಪ್ರತಿಭಟನೆ ಮಾಡಲಾಗುವುದು.



ಗುತ್ತಿಗೆದಾರರ ಸಮಸ್ಯೆಗಳ ಬಗೆಹರಿಸಲು ಹೋರಾಟದ ಫಲವಾಗಿ ಜನರನ್ನು ಜೈಲಿಗೆ ಹಾಕಲು ಪ್ರಯತ್ನ, 40 % ಸರಕಾರ ಎಂದು ನಾವೇ ಕರೆದೆವು. ಸಮಸ್ಯೆಗಳ ಕುರಿತು ಸಿಎಂ ಬಳಿ ಚರ್ಚಿಸುತ್ತೇವೆ. ನಮ್ಮಗೆ ಯಾವುದೇ ಜಾತಿ, ಪಕ್ಷವಿಲ್ಲ ನಮ್ಮದು ಗುತ್ತಿಗೆದಾರ ಜಾತಿ. ನ.29 ಸಭೆಯಿದೆ. ಸಮಸ್ಯೆಗಳ ಕುರಿತು ಇಂಜಿನಿಯರ್ ಜೊತೆಗೆ ಚರ್ಚಿಸುವುದಿದೆ. ಬೆಳಗಾವಿ ಅಧಿವೇಶನದ ಆದ ಮೇಲೆ ಬಾಕಿಯಿರುವ ಎಲ್ಲ ಬಿಲ್ ಗಳನ್ನು ಪಾವತಿಸುತ್ತೇವೆ ಎಂದು ಸಿಎಂ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಕಾರ್ಯಾಗಾರದ ಸಿದ್ಧತೆ ನಡೆಸಿದ್ದೇವೆ. ಸಂಸ್ಥೆಯ ಬೆಳವಣಿಗೆಗೆ ದುಡಿಯಿರಿ.. ಬೆಳಗಾವಿ ಜಿಲ್ಲಾ ಕಾರ್ಯನಿತರ ಗುತ್ತಿಗೆದಾರ ಸಂಘದ ಗೌರವಾಧ್ಯಕ್ಷ ಬಿ.ಕೆ ಮಟಗಾರ, ಜು.31 ರಂದು 2023 ರಲ್ಲಿ ಸಂಘ ಸ್ಥಾಪನೆಯ ಅನಿವಾರ್ಯತೆ ಉಂಟಾಯಿತು. ಗುತ್ತಿಗೆದಾರರು ಅಧಿಕಾರಿಗಳ, ರಾಜಕಾರಣಿಗಳ ಕೈಗೊಂಬೆಯಾಗಿದ್ದೇವೆ.

ನಮ್ಮ ಹಕ್ಕನ್ನು ನಾವು ಪಡಯಬೇಕಾಗಿದೆ. ಅಧಿಕಾರಿಗಳು ಭಷ್ಟರಾಗಿದ್ದಾರೆ. ರಾಜಕಾರಣಿಗಳು ಭ್ರಷ್ಟರಲ್ಲ. ಯಾವುದೇ ಸರಕಾರ ಬಂದರೂ ಬ್ರಷ್ಟಾಚಾರ ಹೋಗಲ್ಲ. ಬ್ರಿಟಿಷರ ನಿಯಮದಂತೆ ಕಪ್ಪು ಕಾಣಿಕೆ ನೀಡುವುದು ಇನ್ನೂ ಜಾರಿಯಲ್ಲಿದೆ.

ಅಧಿವೇಶನದಲ್ಲಿ ಬಾಕಿಯಿರುವ ಎಲ್ಲ ಬಿಲ್ ಗಳನ್ನು ನೀಡುವಂತೆ ಸಾಂಕೇತಿಕ ಧರಣಿ ನಡೆಸಿ, ಉಸ್ತುವಾರಿ ಸಚಿವ, ಸಿಎಂ ಗೆ ಮನವಿ ಸಲ್ಲಿಸುತ್ತೇವೆ.ಯಾವ ಸರಕಾರ ಬಂದರೂ ಹುಚ್ಚರಂತೆ ಕೆಲಸ ಮಾಡುತ್ತೇವೆ. ಸಾಲದಲ್ಲಿ ಗುತ್ತಿಗೆದಾರರು ಸಾಯುವುದು ಬೇಡಾ. ನಮ್ಮ ಸಮಸ್ಯೆಗಳನ್ನು ಬಗೆಹರಿಸಲು ಸತೀಶ ಜಾರಕಿಹೊಳಿ ಅವರು ಬಗೆಹರಿಸುತ್ತಿದ್ದಾರೆ ಗುತ್ತಿಗೆದಾರರ ಲಾಭಾಂಶ ಹೆಚ್ಚಳಕ್ಕೆ ಕ್ರಮ ಕೈಗೊಳ್ಳಬೇಕು, ಗುತ್ತಿಗೆದಾರರ ಸಮಸ್ಯೆ ಬಗೆಹರಿಸಲು ಕೂಡಬೇಕಾದ ಅವಶ್ಯಕತೆಯಿದೆ. ಕೆಲವು ಅಧಿಕಾರಿಗಳು ಗುತ್ತಿಗೆದಾರರ ಬಿಲ್ಲುಗಳನ್ನು ಸರಿಯಾಗಿ ಮಾಡುತ್ತಿಲ್ಲ.

ಇದೇ ಸಂದರ್ಭದಲ್ಲಿ ಶ್ರೀ ನಿಜಗುಣಾನಂದ ಸ್ವಾಮೀಜಿ ಮತ್ತು ಡಾ. ಅಲ್ಲಮ್ಮ ಪ್ರಭು ಸ್ವಾಮೀಜಿ ಗುತ್ತಿಗೆದಾರರ ಅಧ್ಯಕ್ಷ ಕೆಂಪಣ್ಣ ಬೆಳಗಾವಿ ಜಿಲ್ಲಾ ಗುತ್ತಿಗೆದಾರ ಸಂಘದ ಅಧ್ಯಕ್ಷ ರಾಜು ಹಂಪನ್ನವರ್ ಗೌರವಾಧ್ಯಕ್ಷರು ಬಸವರಾಜ ಮಟಗಾರ ಸಂತೋಷ ಗುಡಸ, ಎನ್ ಆರ್ ಖನಗಾವಿ ಸುಭಾಷ್ ಪಾಟೀಲ್ ಜಿ ಎಮ್ ರವೀಂದ್ರ ಮತ್ತು ಪದಾಧಿಕಾರಿಗಳು ಭಾಗವಹಿಸಿದ್ದರು.

# ಉಚಿತ ಕೃತಕ ಕಾಲು ಹಾಗೂ ಕೈಗಳ ಜೋಡಣಾ ಶಿಬಿರ

ಬೆಳಗಾವಿ: ರೋಟರಿ ಪರಿವಾರ,ಬೆಳಗಾವಿ ಮತ್ತು ಸಾಧು ವಾಸವಾನಿ ಮಿಷನ್, ಪುಣೆ ಹಾಗೂ ರೋಟರಿ ಕ್ಲಬ್ ಆಫ್ ಇಂಚಲಕರಂಜಿ ಟೆಕ್ಸಟೈಲ್ ಸಿಟಿ ಇವರ ಸಂಯುಕ್ತ ಸಹಯೋಗದಲ್ಲಿ

ಹಾಗೂ ಭರತೇಶ ಎಜ್ಯುಕೇಶನ್ ಟ್ರಸ್ಟ್,ಬೆಳಗಾವಿ, ರಾಜಸ್ಥಾನಿ ಯುವಕ ಸೇವಾ ಮಂಡಳ, ಶಹಾಪುರ, ಮಾರವಾಡಿ ಯುವ ಮಂಚ ಶಹಾಪುರ ಇವರ ಸಹಾಯದೊಂದಿಗೆ ಆಧುನಿಕ ತಂತ್ರಜ್ಞಾನದಿಂದ ಕೂಡಿದ ಉಚಿತ ಕೃತಕ ಕಾಲು ಹಾಗೂ ಕೈಗಳ ಜೋಡಣಾ ಶಿಬಿರವನ್ನು 3 ಡಿಸೆಂಬರ 2023 (ಅಳತೆ ಶಿಬಿರವನ್ನು) ಸಮಯ ಬೆಳಿಗ್ಗೆ 8.00 ಗಂಟೆಯಿಂದ ಮಧ್ಯಾಹ್ನ 1.00 ಗಂಟೆಯ ವರೆಗೆ ನಗರದ ಭರತೇಶ ಎಜ್ಯುಕೇಶನ್ ಟ್ರಸ್ಟ್, ಫೋರ್ಟ್ ರೋಡ, ಬೆಳಗಾವಿ ಇಲ್ಲಿ ಹಮ್ಮಿಕೊಳ್ಳಲಾಗಿದೆ.

ಹೆಚ್ಚಿನ ಮಾಹಿತಿಗೆ ರೇಣು ಕುಲಕರ್ಣಿ ಮೋ.9538865301, ಶಿತಲ ಚೆಲಮಿ ಮೋ.7899396063, ರಾಜೇಶ ತಳೆಗಾಂವ ಮೋ.9480692471, ಮಲ್ಲಿಕಾರ್ಜುನ ಮುರುಗುಡೆ ಮೋ.9663381838, ಕವಿತಾ ಕಣಗಣ್ಣೆ ಮೋ.7353210009 ಇವರನ್ನು ಸಂಪರ್ಕಿಸಬಹುದಾಗಿದೆ. ಹಾಗೂ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸಂಪುಟ: 4 ಸಂಚಿಕೆ: 249 ಪುಟ: 4 RNI: KARKAN/2020/79084 Regn,No:G-2/PMG/KA/NK/BM/139/2021-23

BELAGAVI VARADI KANNADA DAILY MORNING : Editor, Printer, Publisher & Owned By : **Satish Basavani Gudagenatti,** Basavani House No.53, Ashray Colony, Sarathi Nagar, Tv Center - 590019, TQ & DIST Belagavi, Karnataka.

Printed At : LAXMI PRINTERS, No.627. Auto Nagar - 590016.TQ & DIST Belagavi, Karnataka Mob : 9900332089